
ಜನಪದ ವಿಚಾರ

ಜನಪದ ಸೇವಾ ಟ್ರಸ್ಟ್—ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೪ ಜುಲೈ-೨೦೦೪ ಸಂಚಿಕೆ-೧೨



ಮತದಾರ:
ಚುನಾವಣೆಗೆ ಮುನ್ನ
ಮತ್ತು ಅನಂತರ

ಈ ಸಂಚಿಕೆಯಲ್ಲಿ

1. ಮತದಾರ: ಚುನಾವಣೆಗೆ ಮುನ್ನ ಮತ್ತು ಅನಂತರ.

ಸುರೇಂದ್ರ ಕೌಲಗಿ

ಪ್ರಜಾಪ್ರಭುತ್ವದ ಜೀವನಾಡಿಯಾದ ಮತದಾರ ಎರಡು ಹಂತದಲ್ಲಿ ಪಾತ್ರ ನಿರ್ವಹಿಸಬೇಕಾಗುತ್ತದೆ. ಒಂದು, ಚುನಾವಣೆಯ ಮುನ್ನ; ಇನ್ನೊಂದು, ಚುನಾವಣೆಯ ಅನಂತರ. ಈ ಕುರಿತಾದ ಕೆಲವು ಪ್ರಸ್ತುತ ವಿಚಾರಗಳನ್ನು ಈ ಲೇಖನದಲ್ಲಿ ಬಿಂಬಿಸಲಾಗಿದೆ.

2. ಸ್ವರಾಜ್ಯಾಭಿಮಾನವನ್ನು ಪ್ರಜ್ವಲಿಸಿದ ತಿಲಕ್

ಸುರೇಂದ್ರ ಕೌಲಗಿ

ಮಹಾತ್ಮಗಾಂಧೀ ರಾಷ್ಟ್ರಪಿತನಾಗಿರುವಂತೆ ಲೋಕಮಾನ್ಯತಿಲಕರು ಭಾರತದ ರಾಷ್ಟ್ರವಾದದ ತಂದೆಂಯಾಗಿದ್ದಾರೆ. ತಿಲಕರನ್ನು ಇಂದಿನ ಯುವಕರು ಅರ್ಥಮಾಡಿಕೊಳ್ಳಬೇಕಾಗಿದೆ ಎಂಬ ಆಶಯ ಈ ಲೇಖನದ್ದಾಗಿದೆ.

3. ಪರಿವರ್ತನಾಶೀಲ ನಾಯಕನೇ ಪರಿವರ್ತನೆಯ ಹರಿಕಾರ.

ಅಜಿಂ ಪ್ರೇಮ್‌ಜಿ.

ಖಾಸಗಿವಲಯದ ಕೈಗಾರಿಕೆಗಳ ಮೇಲೆ ದೇಶದ ಅಭಿವೃದ್ಧಿಯ ಜವಬ್ದಾರಿ ಇದೆ. ಆ ಕೈಗಾರಿಕೆಗಳ ನಾಯಕರಲ್ಲಿಯ ಗುಣಗಳನ್ನು ಮತ್ತು ಅವರ ಜವಬ್ದಾರಿಗಳನ್ನು ಪ್ರಸಿದ್ಧ ಕೈಗಾರಿಕೋದ್ಯಮಿ ಅಜಿಂ ಪ್ರೇಮ್‌ಜಿ ತಮ್ಮ ವಿಚಾರಗಳನ್ನು ಈ ಲೇಖನದಲ್ಲಿ ತಿಳಿಸಿದ್ದಾರೆ.

4. ಕಲಘಟಗಿಯ ವಿಶಿಷ್ಟ ಕಾಲೇಜು

ಬಂದಗದ್ದೆ ರಾಮಕೃಷ್ಣ

ಎಲ್ಲ ಕಾಲೇಜುಗಳು ತುಳಿದ ದಾರಿಯನ್ನು ಬಿಟ್ಟು ಬೇರೊಂದು ಹೊಸದಾರಿಯನ್ನು ತುಳಿಯುತ್ತಿರುವ ವಿಶಿಷ್ಟ ಕಾಲೇಜೊಂದರ ಪರಿಚಯ ಈ ಲೇಖನ.

5. ಉಪೇಕ್ಷಿತ ಸಹಪಠ್ಯ ಶಿಕ್ಷಣ

ಸಿ. ಎಂ. ತಿಪ್ಪೇಸ್ವಾಮಿ

ಕೇವಲ ಪಠ್ಯಾಧಾರಿತ ಶಿಕ್ಷಣ ನಿರುಪಯುಕ್ತವೆಂಬುದನ್ನು ಎಲ್ಲರೂ ಕಂಡುಕೊಂಡಿದ್ದಾರೆ. ಅಂಥ ಸಾರ್ವತ್ರಿಕ ಮಹತ್ವದ ವಿಷಯದ ಮೇಲೆ ಈ ಲೇಖನ ಬೆಳಕು ಚೆಲ್ಲುತ್ತದೆ.

6. ಪರಿಸರಮುಖಿ ಶಿಕ್ಷಣ

ಪಿ. ಜೆ. ಸಂಜೀವರಾಜ್

ಪರಿಸರವನ್ನು ಹಾಳುಮಾಡುವುದರಲ್ಲಿ ಶಿಕ್ಷಿತರದು ಎತ್ತಿದ ಕೈ. ಆದ್ದರಿಂದ ಶಿಕ್ಷಣವು ಪರಿಸರ ಮುಖಿಯಾಗಿರ ಬೇಕೆಂಬ ಮಾತನ್ನು ಸಾರುತ್ತದೆ ಈ ಲೇಖನ.

7. ಜಾನಪದದಲ್ಲಿ ಹವಾಮಾನ ಮುನ್ಸೂಚನೆ.

ರಿಚರ್ಡ ಮಹಾಪಾತ್ರ

ನಮ್ಮ ಪ್ರಾಚೀನರು ಹವಾಮಾನ ಮುನ್ಸೂಚನೆಯನ್ನು ಪ್ರಕೃತಿಯಿಂದಲೇ ತಿಳಿಯುವ ಜಾಣರಾಗಿದ್ದರು. ಅವರ ಈ ಜಾಣತನ ಜಾನಪದ ಗೀತೆಗಳಲ್ಲಿ ಕಂಡು ಬರುತ್ತದೆಂಬುದರ ಕಡೆಗೆ ಈ ಲೇಖನ ಬೆಟ್ಟುಮಾಡಿ ತೋರಿಸುತ್ತದೆ.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಜುಲೈ-೨೦೦೪
ಸಂಪುಟ ೫
ಸಂಚಿಕೆ ೧೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎ ೦೮೨೩೬ ೨೯೮೭೫೪
e-mail - janapada@yahoo.com

ಮನಸು

ಬೆಟ್ಟವ ನೋಡಿ ಏನು ಕಲಿತೆ?
ಸುಮ್ಮನಿರುವುದನ್ನು
ಬೆಟ್ಟಸುಮ್ಮನಿದೆ ಎಂದು ಯಾರು
ಹೇಳಿದರು?
ನೀರ ನೋಡಿ ಏನು ಕಲಿತೆ?
ಸುಮ್ಮನೆ ಹರಿವುದನ್ನು,
ಇಳಿವುದನ್ನು, ತೇವಗೊಳಿಸುವುದನ್ನು
ನೀರು ಏರುವುದ ಕಂಡಿಲ್ಲವೆಂದಾದರೆ
ಮತ್ತೇನನ್ನು ಕಲಿತೆ?
ಗಾಳಿಯ ನೋಡಿ ಏನು ಕಲಿತೆ?
ಅಲೆಯುವುದನ್ನು, ನುಗ್ಗಿದಂತೆಯೇ
ಹೊರಬರುವುದನ್ನು,
ಗಾಳಿಯೇ ಭುವಿಯ ಭಾರವ
ಹೊರುವುದ ಕಂಡಿಲ್ಲವಾದರೆ
ಮತ್ತೇನನ್ನು ಕಲಿತೆ?
ಇವೆಲ್ಲವೂ ಏನೆಂದುಕೊಂಡೆ?
ಭೂಮಿ, ನೀರು, ಗಾಳಿ
ಬೆಂಕಿ ಆಕಾಶದಂತೆ
ಪಂಚಭೂತಗಳು.
ಇವೆಲ್ಲವೂ ಮನಸೇ
ಎಂದರಿಯದಿದ್ದರೆ ಮತ್ತೇನನ್ನು ಕಲಿತೆ?
ಗುರುವೇ ಮನಸೆಂದರೆ
ಚಿವುಟಿದರೆ ಹಾ ! ಎನ್ನುತ್ತೇವಲ್ಲ
ಅದೇ ಹೌದಷ್ಟೇ?

✍ ಕೆ. ಪಿ. ಸುರೇಶ್.

ವಿಚಾರ ದೀಪ್ತಿ

ಆಧುನಿಕ ಯುಗದಲ್ಲಿ ನಮ್ಮ ಸಾಂಪ್ರದಾಯಿಕ ಕುಲಕಸುಬುಗಳನ್ನು ಉಳಿಸಿಕೊಳ್ಳಬೇಕಾದ ಅಗತ್ಯವಿದೆ. ಇಂದು ಎಲ್ಲೆಡೆಂಯೂ ಪ್ಲಾಸ್ಟಿಕ್ ಸಂಸ್ಕೃತಿ ತಾಂಡವವಾಡುತ್ತಿದ್ದು ನಮ್ಮ ಸಾಂಪ್ರದಾಯಿಕ ಮಡಕೆ-ಕುಡಿಕೆಗಳ ಬಳಕೆ ಮತ್ತು ತಯಾರಿಕೆ ಮೂಲೆಗುಂಪಾಗಿದೆ. ಮಡಕೆ ತಯಾರಿಕೆಯನ್ನೆ ಕುಲಕಸುಬಾಗಿ ಕೈಗೊಂಡವರು ಈಗ ತೊಂದರೆ ಅನುಭವಿಸುತ್ತಿದ್ದಾರೆ. ಮಡಕೆ ಬಳಕೆಯು ಅನಾದಿಕಾಲದ ಮಾನವನ ಅನ್ವೇಷಣೆಗಳಲ್ಲಿ ಒಂದಾಗಿತ್ತು. ಕುಲಕಸುಬಾಗಿ ಬೆಳೆದು ಬಂದ ಈ ಕಲೆ ಸಂಸ್ಕೃತಿಯ ಅಂಗವಾಗಿ ಸೇರಿಹೋಗಿತ್ತು. ಸಂಸ್ಕೃತಿ ಮತ್ತು ಇತಿಹಾಸದ ಅಧ್ಯಯನಕ್ಕೆ ಲಿಖಿತ ಆಧಾರ ಇಲ್ಲದ ಸಂದರ್ಭದಲ್ಲಿ ಮಡಕೆಗಳೇ ಅತ್ಯುತ್ತಮ ಸಾಕ್ಷ್ಯಾಧಾರವಾಗಿವೆ. ಈ ಕಲೆಯನ್ನು ಈಗ ಉಳಿಸಿ ಬೆಳೆಸಬೇಕಿದೆ. ರಾಜ್ಯದಾದ್ಯಂತ ವಿವಿಧೆಡೆ ಚದುರಿ ಹೋಗಿರುವ ಕುಂಬಾರ ಜನಾಂಗದವರು ಸಂಘಟಿತರಾಗಬೇಕು. ಕುಂಬಾರ ಸಮಾಜದಲ್ಲೂ ಬುದ್ಧಿವಂತರಿದ್ದಾರೆ. ಇವರು ಸಮಾಜದ ಒಗ್ಗಟ್ಟಿಗೆ ಕ್ರಿಯಾಶೀಲರಾಗಬೇಕು. ಮುಂದುವರೆದ ಜನಾಂಗವೂ ಕುಂಬಾರಸಮಾಜ ಮುಂದೆ ಬರಲು ಸಹಕಾರ ನೀಡಬೇಕು.

ಮುರುಘರಾಜೇಂದ್ರಶರಣರು.

ಮತದಾರ: ಚುನಾವಣೆಗೆ ಮುನ್ನ ಮತ್ತು ಅನಂತರ

ಸುರೇಂದ್ರಕೌಲಗಿ

"ಪ್ರತಿಯೊಂದು ರಾಷ್ಟ್ರವು ತನ್ನ ಯೋಗ್ಯತೆಗೆ ತಕ್ಕ ಸರ್ಕಾರವನ್ನು ಹೊಂದಿರುತ್ತದೆ"

-ಜೋಸೆಫ್ ಡೆ ಮೈಸ್ಟರ್

ನಮ್ಮ ದೇಶದ ಲೋಕಸಭೆಗೂ ಹಾಗುನಾಲ್ಕು ರಾಜ್ಯಗಳ ವಿಧಾನಸಭೆಗಳಿಗೂ ಸಾರ್ವತ್ರಿಕ ಚುನಾವಣೆ ಮುಗಿದು ಕೇಂದ್ರದಲ್ಲಿಯೂ ಮತ್ತು ಆಯಾ ರಾಜ್ಯಗಳಲ್ಲಿಯೂ ಸರ್ಕಾರಗಳು ರಚನೆಗೊಂಡಿವೆ. ಈ ಮಾತಿಗೆ ಈಗಾಗಲೆ ಎರಡು ತಿಂಗಳುಗಳಾಗುತ್ತ ಬಂದಿದೆ. ಕೇಂದ್ರ ಸರ್ಕಾರವು ಮತ್ತು ಆಯಾ ರಾಜ್ಯಗಳಲ್ಲಿಯ ಸರ್ಕಾರಗಳು ತಮ್ಮ ತಮ್ಮ ಕನಿಷ್ಠ ಕಾರ್ಯಯೋಜನೆಯನ್ನೂ, ಕಾರ್ಯನೀತಿಯನ್ನೂ ಪ್ರಕಟಿಸಿವೆ. ಚುನಾವಣೆಗೆ ಮುನ್ನ ಹೇಗೋ ಹಾಗೆಯೇ ಚುನಾವಣೆಯ ನಂತರವೂ ಮತದಾರ ಕುತೂಹಲ ದೃಷ್ಟಿಯನ್ನು ಹೊಂದಿದವನಾಗಿ ರಾಜಕೀಯ ಬೆಳವಣಿಗೆಗಳನ್ನು ನೋಡುತ್ತಿದ್ದಾನೆ. ಚುನಾವಣೆಯ ಮೊದಲಿನಂತೆಯೆ ಅನಂತರವೂ ಮತದಾರ ಅಪಾತ್ರಧಾರಿ ಪ್ರೇಕ್ಷಕನಾಗಿ ತನ್ನ ಎಂದಿನ ವಿಶಿಷ್ಟ ಪಾತ್ರವನ್ನು ನಿರ್ವಹಿಸುತ್ತಿದ್ದಾನೆ!

ಚುನಾವಣೆಯ ಸಮಯದಲ್ಲಿ ದೇಶದ ಎಲ್ಲ ರಾಜಕೀಯ ಪಕ್ಷಗಳು ಮತದಾರನನ್ನು ಉಪೇಕ್ಷಿಸಿದ್ದವು; ಮತದಾರನು ಸಹ ತನಗೇಕೆ ರಾಜಕೀಯದ ಹವ್ಯಾಸವೆಂದು ತನ್ನ ಎಂದಿನ ಉದಾಸೀನ ಮನೋಭಾವನೆಯನ್ನು ತಳೆದಿದ್ದ. ರಾಜಕೀಯ ಪಕ್ಷಗಳ ಹಣಬಲದೊಡನೆ, ಅವುಗಳ ನಾಯಕರ ಅಸಭ್ಯ ವರ್ತನೆಗಳೊಡನೆ ತನ್ನ ಶಕ್ತಿ ಸರಿಸಾಟಿಯಿಲ್ಲವೆಂಬ ಭಾವನೆ ಮತದಾರನನ್ನು ಕಾಡಿತ್ತು. ಅಲ್ಲದೆ, ಮತದಾರ ಯಾವ ಹಂತದಲ್ಲೂ ಸಂಘಟಿತನಾಗಿರಲಿಲ್ಲ. ಮತ್ತು ದೇಶದ ಭವಿಷ್ಯವನ್ನು ಯಾವ ವಿಚಾರ ಅಥವಾ ಸಿದ್ಧಾಂತದ ಪಕ್ಷಗಳ ಕೈಗೆ ಕೊಡಬೇಕೆಂಬ ಸ್ಪಷ್ಟತೆಯೂ ಮತದಾರನ ಮನಸ್ಸಿನಲ್ಲಿರಲಿಲ್ಲ. ಆದ್ದರಿಂದ ಚುನಾವಣೆಯನ್ನು ಅವನು ಗಂಭೀರವಾಗಿ ಪರಿಗಣಿಸಿದ್ದನೆ ಎಂಬುದರ ಬಗ್ಗೆಯೆ ಸಂಶಯ ಮೂಡುತ್ತದೆ. ಕೇಂದ್ರದಲ್ಲೂ, ರಾಜ್ಯದಲ್ಲೂ ಯಾವುದೇ ಒಂದು ಪಕ್ಷಕ್ಕೆ ಬಹುಮತ ಬರುವಂತೆ ಮಾಡದೆ ಕೇಂದ್ರ ಮತ್ತು ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರದ ಸ್ಥಾಪನೆಗೆ ಕಾರಣವಾದುದು ಈ ಸಂಶಯಕ್ಕೆ ಇಂಬು ಕೊಡುತ್ತದೆ.

ಚುನಾವಣೆಯ ಮೊದಲು ಹೇಗೋ ಅನಂತರವೂ ಮತದಾರ ತನ್ನ ರಾಜಕೀಯ ಉದಾಸೀನತೆಯಿಂದ ಅಪಮೌಲ್ಯಗೊಂಡಿದ್ದಾನೆ.

ಮತದಾರನ ಅಪಮೌಲ್ಯದ ಮೊಟ್ಟ ಮೊದಲನೆಯ ಸಂಕೇತ ಅವಧಿಗಿಂತ ಮುನ್ನವೇ ಚುನಾವಣೆಯನ್ನು ನಡೆಸಲು ರಾಜಕೀಯ ಪಕ್ಷಗಳು ಕೈಗೊಂಡ ತೀರ್ಮಾನ ಮತ್ತು ಈ ತೀರ್ಮಾನವನ್ನು ಪ್ರತಿಭಟಿಸದೆ ಮೂಕ ಕುರಿಯಂತೆ ಮತಗಟ್ಟೆಗೆ ಹೋಗಿ ಮತ ಹಾಕಿದ್ದು! ಇದರ ಅರ್ಥ ಈ ಮೊದಲಿನ ಚುನಾವಣೆಯಲ್ಲಿ ಅವನು ಹಾಕಿದ್ದ ಮತದಾನಕ್ಕೆ ಕವಡೆ ಕಿಮ್ಮತ್ತಿಲ್ಲವೆಂಬುದು! ಅವನ ಅಪಮೌಲ್ಯದ ಎರಡನೆಯ ಸಂಕೇತವೆಂದರೆ ರಾಜಕೀಯ ಪಕ್ಷಗಳು ಪ್ರಕಟಿಸಿದ್ದ ಪ್ರಣಾಳಿಕೆಗಳು ಮತದಾರನ ಬಳಿ ತಲುಪದೇ ಇದ್ದುದು. ಎಲ್ಲಿಯೂ ಸಹ ಈ ಪ್ರಣಾಳಿಕೆಕುರಿತು ಮತದಾರರ ವಿಚಾರಗೋಷ್ಠಿಗಳು, ಕಾರ್ಯಾಗಾರಗಳು ಇತ್ಯಾದಿ ನಡೆಯಲಿಲ್ಲ. ರಾಜಕೀಯ ಪಕ್ಷಗಳ ಉಮೇದುವಾರರು ಚುನಾವಣಾ ಸಮಯದಲ್ಲಿ ಮತಯಾಚಿಸಿ ಹಂಚಿದ್ದ ತುಂಡು ಹಸ್ತಪತ್ರಿಕೆಗಳನ್ನು ಓದಿ, ಉಮೇದುವಾರನ ಬಣ್ಣಬಣ್ಣದ ಕಟೌಟ್ ನೋಡಿ ಮತ ಹಾಕಿದ್ದು.

ಮೂರನೆಯ ಸಂಕೇತ, ಮತದಾರನ ಹೆಸರುಗಳು ಪಟ್ಟಿಯಿಂದ ಮಾಯುವಾದದ್ದು. ಒಂದು ದೊಡ್ಡ ರಾಜಕೀಯ ಪಕ್ಷದ ನಾಯಕರೂ, ಪ್ರಧಾನಮಂತ್ರಿಯೂ ಆಗಿದ್ದ ದೇವೇಗೌಡರಂಥ ಮತದಾರರ ಹೆಸರೇ ಮತಪಟ್ಟಿಯಿಂದ ಮಾಯವಾಗಿತ್ತು. ಇಂಥ ಉದಾಹರಣೆಗಳು ಹೇರಳವಾಗಿವೆ.

ನಾಲ್ಕನೆಯ ಸಂಕೇತವೆಂದರೆ: ಮತದಾರರ ಅಭಿಪ್ರಾಯ, ಅನಿಸಿಕೆ, ಅಗತ್ಯತೆ ಇತ್ಯಾದಿಗಳನ್ನು ಗಮನಿಸದೆ ಬೆಂಗಳೂರು, ದಿಲ್ಲಿ ಹೈದರಾಬಾದ್, ಚೆನ್ನೈನಂಥ ದೂರದ ನಗರಗಳಲ್ಲಿ ಕುಳಿತು ರಾಜಕಾರಣಿಗಳು ತಮಗೆ ಅನುಕೂಲವಾಗುವ ರೀತಿಯಲ್ಲಿ ರಾಜಕೀಯ ಪಕ್ಷಗಳನ್ನು ರಚಿಸಿ ಅಥವಾ ಹೊಂದಾಣಿಕೆ ಮಾಡಿಕೊಂಡು ಚುನಾವಣಾ ಕಣಕ್ಕೆ ಇಳಿದದ್ದು. ಒಂದು ರಾತ್ರಿ ಕಳೆಯುವ ಮೊದಲೇ ಪಕ್ಷಾಂತರಗೊಂಡು ಬೆಳಗಾಗುವ ಹೊತ್ತಿಗೆ ಬೇರೆ ಪಕ್ಷದ ಉದಯವಾಗುವುದು ಮತ್ತು ಹೊಸ ಪಕ್ಷದ ಸದಸ್ಯನಾಗುವುದು ಇತ್ಯಾದಿ ಚುನಾವಣೆಯ ಅಂತಿಮ ಅವಧಿಯವರೆಗೂ ನಡೆದೇ ಇತ್ತು. ಈ ಕಾರಣದಿಂದಾಗಿ ಮತದಾರನಿಗೆ ಯಾವುದೇ ಪಕ್ಷ ಅಥವಾ ಅಭ್ಯರ್ಥಿಯ ಬಗ್ಗೆ ಆಮೂಲಾಗ್ರವಾಗಿ ಯೋಚನೆ ಮಾಡಲು ಕಾಲಾವಕಾಶವೇ ಸಿಗದೆ ಕೇವಲ ಯಾಂತ್ರಿಕವಾಗಿ ಮತ ಚಲಾಯಿಸಿದ್ದ. ಏತನ್ಮಧ್ಯೆ ಮಾಧ್ಯಮದ ಮೂಲಕ ಅನಧಿಕೃತ ಸಂಸ್ಥೆಗಳ ಚುನಾವಣಾ ಫಲಿತಾಂಶ ಕುರಿತ ವರದಿಗಳ ಪ್ರಕಟಣೆ. ಇವೆಲ್ಲವೂ ಸೇರಿ ಚುನಾವಣಾ ರಂಗ ಗೊಂದಲಮಯವಾಗಿ ಮತದಾರ ಪಕ್ಕಕ್ಕೆ ತಳ್ಳಲ್ಪಟ್ಟ. ಇದರ

ಪರಿಣಾಮ ಚುನಾವಣಾ ಫಲಿತಾಂಶದ ಮೇಲೆ ಬೀಳದೆ ಇರಲಿಲ್ಲ.

ಒಂದು; ಮತದಾನದ ಶೇಕಡಾ ಪ್ರಮಾಣ ೬೦ಕ್ಕೆ ಮೀರಲಿಲ್ಲ;

ಎರಡು; ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಬರಲಿಲ್ಲ

ಮೂರು; ಅತಂತ್ರ ಸರ್ಕಾರಗಳ ರಚನೆ ತಪ್ಪಲಿಲ್ಲ.

ನಾಲ್ಕು; ಪುನಃ ಚುನಾವಣೆಯ ಭೀತಿ ತೊಲಗಲಿಲ್ಲ.

ಐದು; ಅಪರಾಧಿ ರಾಜಕಾರಣಿಗಳಿಗೆ ಅಧಿಕಾರದ ಗದ್ದುಗೆ ತಪ್ಪಲಿಲ್ಲ.

ಆರು; ಗ್ರಾಮಗಳಲ್ಲಿ ವಿದ್ವೇಷದ ಉರಿ ಆರಲಿಲ್ಲ; ಹೆಚ್ಚಾಯಿತು.

ಏಳು; ಜಾತಿ ಮತ್ತು ಮತೀಯ ರಾಜಕಾರಣ ಕೊನೆಗೊಳ್ಳಲಿಲ್ಲ.

ಎಂಟು; ವಿಚಾರವಂತ, ಜಾಗ್ರತ, ಸಕ್ರಿಯ ಉಮೇದುವಾರರಿಗೆ ಪ್ರೋತ್ಸಾಹ ಸಿಗಲಿಲ್ಲ.

ಒಂಭತ್ತು; ಸಮಾಜದಲ್ಲಿ ಅಶಾಂತಿ ಉಂಟಾಗುವುದು ನಿಲ್ಲಲಿಲ್ಲ.

ಹತ್ತು; ಉಮೇದುವಾರರನ್ನಾಗಿ ರಾಜಕಾರಣದ ಅನುಭವವಿರದ ವ್ಯಕ್ತಿಗಳನ್ನು ಪಕ್ಷಗಳು ಕಣಕ್ಕಿಳಿಸಿದ್ದು.

ಚುನಾವಣೋತ್ತರದ ಇಂಥ ದುಸ್ಥಿತಿಗೆ ಮುಖ್ಯಕಾರಣ ಮತದಾರ ರಾಜಕೀಯವಾಗಿ ಅಪಮೌಲ್ಯಗೊಂಡುದುದು.

ಅಪಮೌಲ್ಯಕ್ಕೆ ಕಾರಣ ಮತ್ತು ಹೊಣೆ ಮತದಾರನೇ ಆಗಿದ್ದಾನೆಂಬುದೇ ಸಮಸ್ಯೆಯ ತಿರುಳಾಗಿದೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಪ್ರಜಾಪ್ರಭುತ್ವರಾಜ್ಯ ಪದ್ಧತಿಯನ್ನು ಅಳವಡಿಸಿಕೊಂಡು, ನಂತರ ಗಣರಾಜ್ಯದ ಸ್ಥಾಪನೆ ಮಾಡಿಕೊಂಡಾಗಿನಿಂದಲೂ ದೇಶದ ಮತದಾರನಿಗೆ ದೊರೆಯಬೇಕಾದ ಶಿಕ್ಷಣ ಹಾಗೂ ಗೌರವ ದೊರೆತಿಲ್ಲ. ಮತದಾರನೇ ದೇಶದ ಪ್ರಭುವೆಂದು ಜಯಪ್ರಕಾಶರು ಹೇಳಿದ್ದರು. ಸಂವಿಧಾನವೂ ಸಹ ಮತದಾನದ ಹಕ್ಕು ಕೊಟ್ಟು ಆ ಮಾತನ್ನು ಪುಷ್ಟೀಕರಿಸಿದೆ. ಆದರೆ ವಸ್ತುಸ್ಥಿತಿಯೇ ಬೇರೆಯಾಗಿದೆ. ಇಂದು ಮತದಾರ ವಾಣಿಜ್ಯ ವಸ್ತುವಾಗಿದ್ದಾನೆ. ಅವನನ್ನು ಖರೀದಿಸಬಹುದು ಮತ್ತು ಮಾರಲೂಬಹುದು; ಅವನು ರಾಜಕಾರಣಿಗಳ ಹಾಗೂ ಅಧಿಕಾರಿಗಳ ದಾಸನಾಗಿದ್ದಾನೆ; ರಾಜಕಾರಣಿಗಳ ಸುತ್ತ ಮತ್ತು ಅಧಿಕಾರಿಗಳ ಸುತ್ತ ಸುತ್ತುವ ಗಿರಿಗಿಟ್ಟಳೆಯಾಗಿದ್ದಾನೆ; ಅವನಿಗೆ ಸಾರ್ವಜನಿಕ ಜೀವನದಲ್ಲಿ ಕಿಮ್ಮತ್ತು ಇಲ್ಲವಾಗಿದೆ. ಒಂದೊಂದು ಚುನಾವಣೆಯೂ ಅವನನ್ನು ಗೋಡೆಗೆ ತಳ್ಳಿವೆ. ಚುನಾವಣೆಯ ಮುನ್ನ ಅವನನ್ನು ಆರಾಮು ಖರ್ಚಿಯ ಮೇಲೆ ಕೂಡಿಸಿ ಭರವಸೆಯ ಚವರಿಯನ್ನು ಬೀಸಲಾಗುತ್ತದೆ;

ಚುನಾವಣೆ ಮುಗಿದ ಮೇಲೆ ಅವನನ್ನು ಮುಳ್ಳಿನ ಹಾಸಿಗೆಯ ಮೇಲೆ ಮಲಗಿಸಲಾಗುತ್ತದೆ.

ರಾಜಕಾರಣಿ ಅಥವಾ ಅಧಿಕಾರಿಯಿಲ್ಲದೆ ಅವನು ಸ್ವತಂತ್ರವಾಗಿ ಯಾವ ಕಾರ್ಯಕ್ರಮವನ್ನೂ ನಡೆಸಲಾರದಂಥ ಅಸಹಾಯಕತೆಯ ಸ್ಥಿತಿಗೆ ಇರಿಸಲ್ಪಡುತ್ತಾನೆ. ಪೂರ್ಣಚಂದ್ರ ತೇಜಸ್ವಿ ಚಿತ್ರಿಸಿದ ತಬರನಕಥೆಗೆ ಭಿನ್ನವಾದ ಸ್ಥಿತಿ ಮತದಾರನದಾಗಿಲ್ಲ.

ಚುನಾವಣೆಯ ಮುನ್ನ ಮತದಾರನ ಸ್ಥಿತಿ ಇದಾದರೆ ಚುನಾವಣಾ ಅನಂತರದ ಸ್ಥಿತಿ ಭಿನ್ನವಾಗೇನೂ ಇಲ್ಲ.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಹಾಕಿಕೊಂಡಿರುವ ಕನಿಷ್ಟ ಕಾರ್ಯಕ್ರಮಸೂಚಿಯ ವಿಷಯವನ್ನೇ ನೋಡುವ; ಆ ಕಾರ್ಯಕ್ರಮದ ರೂಪರೇಷೆಯ ಹಿಂದೆ ಸಂಯುಕ್ತ ಸರ್ಕಾರಗಳಲ್ಲಿರುವ ಆಯಾ ಪಕ್ಷಗಳಿಗೆ ತಮ್ಮ ತಮ್ಮ ರಾಜಕೀಯ ಭವಿಷ್ಯವನ್ನು ರೂಪಿಸುವ ಬಗೆ ಹೇಗೆ ಎಂಬ ಚಿಂತನೆಯಿದೆಯೇ ಹೊರತು ಇಲ್ಲಿಯೂ ಸಹ ಮತದಾರನನ್ನು ಕುದುರೆಯ ಮೇಲೆ ಕೂಡಿಸಿ ಸಂಭ್ರಮಿಸಿ ನೋಡುವ ಯತ್ನವಿದೆ.

ಈ ಕನಿಷ್ಠ ಕಾರ್ಯಕ್ರಮಸೂಚಿಯಲ್ಲಿ ಕಾಣಿಸಲಾದ ವಿವರಗಳು ಕೇಂದ್ರ ಸರ್ಕಾರವನ್ನು ರಚಿಸಿರುವ ಪ್ರಗತಿಪರ ಪಕ್ಷಗಳ ಸಂಘಟನೆಯಲ್ಲಿರುವ ವಿವಿಧ ಧೋರಣೆಯ ರಾಜಕೀಯ ಪಕ್ಷಗಳ ವಿಚಾರಗಳ ಗೊಂದಲದ ಒಂದು ಸಾಮಗ್ರಿಯಾಗಿದೆಯೇ ಹೊರತು ಅಮೇರಿಕಾ-ರಷ್ಯಾ-ಜಪಾನ್ ಮತ್ತು ವಿಶ್ವಬ್ಯಾಂಕ್‌ದಿಂದಧನಸಹಾಯ ಮುಕ್ತ, ನಿಶ್ಯಸ್ತ್ರೀಕರಣದತ್ತ ಸಾಗುವ, ಸ್ವದೇಶಾಭಿಮಾನ ಸಾರುವ, ಸ್ವರಾಜ್ಯದ ಭಾವನೆ ಬೇರೂರುವಂಥ ಸಮಾಜದ ರಚನೆಯ ವಿಚಾರವನ್ನು ಸ್ಪಷ್ಟವಾಗಿ ಮಂಡಿಸಲು ವಿಫಲವಾಗಿದೆ. ಇಂದಿನ ಮತದಾರ ಬಯಸುವಂಥ ಸಮಾಜ ಇದಾಗಿದೆಯೇ ಹೊರತು ಹಿಂದಿನ ಸರ್ಕಾರಗಳು ೧೯೯೦ ನೇ ಇಸವಿಯಿಂದ ಅನುಸರಿಸುತ್ತ ಬಂದಿರುವ ವಿಶ್ವೀಕರಣ-ಉದಾರೀಕರಣ-ವಾಣಿಜ್ಯೀಕರಣ-ಖಾಸಗೀಕರಣ-ಕಂಪ್ಯೂಟರೀಕರಣ-ಪಾಶ್ಚಾತ್ತೀಕರಣದಂಥ ನೀತಿಯನ್ನು ಅಳವಡಿಸಿಕೊಂಡಿರುವ ಸಮಾಜವಲ್ಲ.

ಈಗಿನ ಕೇಂದ್ರ ಸರ್ಕಾರದ ಕನಿಷ್ಠ ಕ್ರಿಯಾ ಯೋಜನೆಯನ್ನು ನೋಡಿದರೆ ಅದು ಮತದಾರನ ಕಣ್ಣಿಗೆ ಮಣ್ಣೆರಚುವಂಥ ಕ್ರಿಯಾ ಯೋಜನೆಯಾಗಿದೆ. ಅದು ಪರಿಸರ ರಕ್ಷಣೆ, ಬೃಹತ್ ಯೋಜನೆಗಳ ನಿರರ್ಥಕತೆ, ಹೊಸ ಶಿಕ್ಷಣ, ಗ್ರಾಮೀಣ ಸಮಸ್ಯೆಗಳ ಪರಿಹಾರ ಇತ್ಯಾದಿಗಳನ್ನು ತಿಳಿಸಲು ವಿಫಲವಾಗಿದೆ.

ಕನಿಷ್ಠ ಕಾರ್ಯ ನೀತಿಯನ್ನು ರಚಿಸುವ ಕ್ರಿಯೆಯಲ್ಲಿ ಪಕ್ಷಾತೀತ ಮನೋಭಾವ ಇಲ್ಲದಿರುವುದು ಕಂಡುಬರುತ್ತದೆ.

ಪರಿಸ್ಥಿತಿ ಹೀಗಿರುವಾಗ ತನ್ನ ಮತವನ್ನು ಪ್ರಯೋಗಿಸಿ ಹೊಸ ಸರ್ಕಾರದ ಬರುವಿಕೆಗೆ ಕಾರಣನಾದ ಮತದಾರ ತನ್ನ ಪಾತ್ರವೇನು ಎಂಬ ಪ್ರಶ್ನೆಯನ್ನು ಕುರಿತು ಆಲೋಚಿಸಿಬೇಕಿದೆ. ನಾಟಕನೋಡಲು ಟಿಕೆಟ್ ಪಡೆದ ಪ್ರೇಕ್ಷಕ, ನಾಟಕ ಮುಗಿದ ನಂತರ ಟಿಕೆಟ್‌ನ್ನು ಹರಿದುಹಾಕುವಂತೆ ಇಂದು ಮತದಾರ ಚುನಾವಣೆಯಾದ ನಂತರ ತನ್ನ ಹೊಣೆ ಮುಗಿಯಿತೆಂಬ ಮನೋಭಾವದಲ್ಲಿದ್ದಾನೆ.

ಚುನಾವಣೆಗೆ ಮುನ್ನ ಇದ್ದ ಮನೋಸ್ಥಿತಿಗೂ, ಚುನಾವಣೆಯ ನಂತರದ ಮನೋಸ್ಥಿತಿಗೂ ಯಾವ ವ್ಯತ್ಯಾಸವೂ ಇಲ್ಲವಾಗಿದೆ.

ಇತ್ತೀಚಿಗೆ ಹದಿನಾಲ್ಕನೇ ಲೋಕಸಭೆ ಹಾಗೂ ಹನ್ನೆರಡನೇ ವಿಧಾನಸಭೆ ಪ್ರಾರಂಭವಾದವು. ಈ ಸದನಗಳ ಸಂಯುಕ್ತ ಅಧಿವೇಶನವನ್ನು ಕುರಿತು ರಾಷ್ಟಪತಿಯವರೂ, ರಾಜ್ಯಪಾಲರೂ ತಮ್ಮ ಉದ್ದೇಶಿಸಿ ಭಾಷಣ ಮಾಡಿದರು. ಇವರ ಈ ಭಾಷಣದ ವಂದನಾರ್ಪಣೆಗೆ ಮುನ್ನ ಚರ್ಚೆನಡೆಸಬೇಕು, ಆದರೆ ಲೋಕಸಭೆಯಲ್ಲೂ ಮತ್ತು ರಾಜ್ಯದ ಶಾಸನಸಭೆಗಳಲ್ಲೂ ವಿರೋಧಪಕ್ಷಗಳವರ ಅನಿಯಂತ್ರಿತ ಅಶಿಸ್ತಿನಿಂದ ವಂದನಾಗೊತ್ತುವಳಿ ಚರ್ಚೆಯಿಲ್ಲದೆ ಸ್ವೀಕೃತವಾಯಿತು. ಸಂಸದೀಯ ಪ್ರಜಾಪ್ರಭುತ್ವದಲ್ಲಿ ಈ ಚರ್ಚೆಗಳು ನಡೆಯಬೇಕಾದುದು ಅದರ ಗುಣಲಕ್ಷಣ. ಆದರೆ ಪ್ರಜಾಪ್ರತಿನಿಧಿಗಳು ತಾವು ಆರಿಸಲ್ಪಟ್ಟ ಸಂಸದೀಯ ವ್ಯವಸ್ಥೆಯನ್ನು ಮರೆತು ಹೊಣೆಗೇಡಿತನದಿಂದ ವರ್ತಿಸಿ ಮತದಾರನಿಗೆ ಅವಮಾನ ಮಾಡಿದ್ದಾರೆ. ಎಲ್ಲರಿಗೂ ಗೊತ್ತಿರುವಂತೆ ಲೋಕಸಭೆಯುಅಧಿವೇಶನದಲ್ಲಿರುವಾಗ ಪ್ರತಿ ಒಂದು ನಿಮಿಷಕ್ಕೆ ೧೭ ಸಾವಿರ ರೂಗಳಷ್ಟು ಖರ್ಚಾಗುತ್ತದೆ. ಇಷ್ಟು ಬೆಲೆ ಬಾಳುವ ಲಕ್ಷಾಂತರ ನಿಮಿಷಗಳನ್ನು ನಮ್ಮ ಪ್ರತಿನಿಧಿಗಳು ಆರೋಪ-ಪ್ರತ್ಯಾರೋಪಗಳನ್ನು ಮಾಡುವುದರಲ್ಲಿಯೇ ಕಳೆದರು. ಈಗ ಕೇಂದ್ರದಲ್ಲಿ ೧೬ ಪಕ್ಷಗಳ ಮತ್ತು ರಾಜ್ಯದಲ್ಲಿ ೨ ಪಕ್ಷಗಳ ಸಮ್ಮಿಶ್ರ ಸರ್ಕಾರ ಇರುವುದರಿಂದ ಶಾಸನ ಸಭೆಗಳ ಬಹು ದುಬಾರಿ ಸಮಯ ವ್ಯರ್ಥವಾಗಿ ಕಳೆದು ಹೋಗುವುದರಲ್ಲಿ ಅನುಮಾನವಿಲ್ಲ. ಇಲ್ಲಿ ಡಿ.ವಿ.ಜಿಯವರ ಅನುಭವದ ಮಾತುಗಳು ಅನಿವಾರ್ಯವಾಗಿ ನೆನಪಿಗೆ ಬರುತ್ತವೆ. ಅವರು ಹೇಳಿರುವುದೇನೆಂದರೆ, ರಾಜಕೀಯದ ವಿಮರ್ಶೆಯ ಕರ್ತವ್ಯಭಾಗದಲ್ಲಿ ನಾವು ಇನ್ನೂ ಬಹು ಹಿಂದೆ ಇದ್ದೇವೆ. ವಿಮರ್ಶನವೆಂದರೆ ಕೋಪದ ಕೂಗಾಟವಲ್ಲ. ಅದಕ್ಕೆ ಜ್ಞಾನದ ಆಧಾರವಿರಬೇಕು ಮತ್ತು ಅದರಲ್ಲಿ ಪಕ್ಷಕಕ್ಷಿಗಳ ರೋಷಗಳೂ

ಅಸೂಯೆಗಳೂ ಇರಬಾರದು. ಈ ಮಾತನ್ನು ಮತದಾರ ತನ್ನ ಪ್ರತಿನಿಧಿಗೆ ತಿಳಿಸುವ ಬಗೆಯಂತು? ಇದನ್ನು ಕುರಿತು ಚುನಾವಣೋತ್ತರ ಮತದಾರನ ಬಳಿ ಯಾವ ಉತ್ತರವಿದೆ?

ಕರ್ನಾಟಕ ರಾಜ್ಯಕ್ಕೆ ಇಬ್ಬರು ಮುಖ್ಯಮಂತ್ರಿಗಳ ಅಗತ್ಯವಿತ್ತೇ, ಇದೆಯೇ ಎಂಬುದನ್ನು ಕುರಿತು ಮತದಾರ ಯೋಚಿಸಿದ್ದಾನೆಯೇ? ಇಬ್ಬರು ಮುಖ್ಯಮಂತ್ರಿಗಳು ಬೇಕಿಲ್ಲವಾದರೆ ಆ ವಿಷಯವನ್ನು ಪ್ರತಿಭಟಿಸಿದ್ದಾನೆಯೇ?

ಇದೇ ರೀತಿ ೨೦೦೪ ನೇ ಇಸ್ವಿಯ ಚುನಾವಣೆಯಲ್ಲಿ ಯಾವ-ಯಾವ ಆರ್ಥಿಕ ನೀತಿಗಳು ಪಣಕ್ಕೆ ಒಡ್ಡಲ್ಪಟ್ಟಿದ್ದವು ಮತ್ತು ಅಂಥವುಗಳಲ್ಲಿ ಯಾವ ಪ್ರಕಾರದ ಆರ್ಥಿಕ ನೀತಿಗೆ ತಾನು ಮತ ಚಲಾಯಿಸಿದ್ದು ಹಾಗೂ ಈಗ ಹೊಸ ಸರ್ಕಾರ ಆ ನೀತಿಯನ್ನು ಅನುಷ್ಠಾನಕ್ಕೆ ತರಲು ಎಷ್ಟರ ಮಟ್ಟಿಗೆ ಕಟಿಬದ್ಧವಾಗಿದೆ ಎಂಬುದನ್ನು ಕುರಿತು ಮತದಾರ ಆಲೋಚಿಸಿದ್ದಾನೆಯೇ? ಹಾಗಿಲ್ಲವಾದಲ್ಲಿ ಅದನ್ನು ಪ್ರತಿಭಟಿಸಬಲ್ಲನೇ?.

ಇರಾಕಿನಿಂದ ಪ್ರೇಮ ಪತ್ರ

ಇರಾಕಿನಲ್ಲಿ ಆರು ತಿಂಗಳು ಸೇನೆಯಲ್ಲಿ ಸೇವೆ ಸಲ್ಲಿಸಿ ರಾಜೇಶ್ ಭಾರತಕ್ಕೆ ಹಿಂದಿರುಗಿದ. ಬೆಂಗಳೂರಿನಲ್ಲಿರುವ ತನ್ನ ತಂದೆ-ತಾಯಿಗಳಿಗೆ ದಿಲ್ಲಿಯಿಂದ ಫೋನ್ ಮಾಡಿದ.

"ಪ್ರೀತಿಯ ತಂದೆಯೆ, ನಾನು ಮನೆಗೆ ಬರುತ್ತಿದ್ದೇನೆ. ಆದರೆ ನನ್ನೊಂದಿಗೆ ಒಬ್ಬ ಸ್ನೇಹಿತನಿದ್ದಾನೆ. ಅವನನ್ನು ನನ್ನೊಂದಿಗೆ ಕರೆದುಕೊಂಡು ಬರಲು ಬಯಸಿದ್ದೇನೆ."

"ಖಂಡಿತವಾಗಿ ಕರೆದುಕೊಂಡು ಬಾ ನಾವು ಅವನನ್ನು ಭೇಟಿ ಮಾಡಲು ಇಷ್ಟಪಡುತ್ತೇವೆ" ಎಂದು ತಂದೆ ಹೇಳಿದರು.

"ನನ್ನ ಆ ಸ್ನೇಹಿತನ ಬಗ್ಗೆ ಇನ್ನಷ್ಟು ವಿವರಗಳನ್ನು ನೀವು ತಿಳಿಯಬೇಕು" ಎಂದು ಮಗನು ತನ್ನ ಮಾತನ್ನು ಮುಂದುವರೆಸಿದ "ನನ್ನ ಸ್ನೇಹಿತನು ಒಂದು ಬಾಂಬ್ ಸ್ಫೋಟದಲ್ಲಿ ತನ್ನ ಕೈ ಮತ್ತು ಕಾಲನ್ನು ಕಳೆದು ಕೊಂಡಿದ್ದಾನೆ. ಅವನಿಗೆ ಹೋಗಲು ಯಾವ ಸ್ಥಳವೂ ಇಲ್ಲ. ಅವನು ನನ್ನೊಂದಿಗೆ ಬರಬೇಕು ಮತ್ತು ನಮ್ಮೊಂದಿಗೆ ಇರಬೇಕೆಂಬುದು ನನ್ನ ಬಯಕೆ".

ಆಗ ರಾಜೇಶನ ತಂದೆ ಈ ರೀತಿ ಹೇಳಿದರು "ಈ ವಿಷಯವನ್ನು ಕೇಳಿ ನನಗೆ ವಿಷಾದವೆನಿಸುತ್ತದೆ. ನಿನ್ನ ಆ ದುರ್ದೈವಿ ಸ್ನೇಹಿತನಿಗಾಗಿ ಬೇರೆ ಸ್ಥಳವನ್ನು ನಾವು ಹುಡುಕ ಬಹುದು". ಮಗ ಉತ್ತರಿಸಿದ "ಹಾಗಲ್ಲ ಅವನು ನಮ್ಮೊಂದಿಗೇ ಇರಬೇಕೆಂದು ನನ್ನ ಇಚ್ಛೆ". (ಪುಟ 13ರಲ್ಲಿ ಮುಂದುವರೆದಿದೆ...)

ಸ್ವರಾಜ್ಯಾಭಿಮಾನವನ್ನು ಪ್ರಜ್ವಲಿಸಿದ ತಿಲಕ್

ಸುರೇಂದ್ರಕೌಲಗಿ

(ಜುಲೈ ಮಾಹೆ ಲೋಕಮಾನ್ಯ ತಿಲಕರ ಜನ್ಮತಿಂಗಳು. ಆ ನಿಮಿತ್ತವಾಗಿ ಅವರ ಸ್ಮರಣಾರ್ಥ ಈ ಲೇಖನ)

"ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಅದನ್ನು ದೊರಕಿಸಿಯೇ ತೀರುತ್ತೇನೆ'' ಎಂದು ಭಾರತಕ್ಕೆ ಸ್ವಾತಂತ್ರ್ಯ ಬರುವ ಇಪ್ಪತ್ತೇಳು ವರ್ಷ ಮೊದಲೇ ಧೀರೋದಾತ್ತವಾಗಿ ಹೇಳಿದ ಮಹಾನ್ ನಾಯಕ ಬಾಲ ಗಂಗಾಧರ ತಿಲಕ್. ಅವರು ತಮ್ಮ ೬೦ವರ್ಷಗಳ ಜೀವಿತಕಾಲದಲ್ಲಿ ಅರ್ಧದಷ್ಟು ಕಾಲವನ್ನು ಇಂಗ್ಲಿಷ್ ಸರ್ಕಾರದ ವಿರುದ್ಧ ಹೋರಾಡುವುದರಲ್ಲಿಯೇ ಕಳೆದರು. ಈ ಅವಧಿಯಲ್ಲಿ ೭-೮ ವರ್ಷಗಳ ಕಾಲ ಕಾರಾಗೃಹವಾಸವನ್ನೂ ಅನುಭವಿಸಿದರು. ಸ್ವರಾಜ್ಯ ಬರದೇ ದೇಶದ ಉದ್ಧಾರವಿಲ್ಲವೆಂದು ಧೃಡವಾಗಿ ನಂಬಿದ್ದ ತಿಲಕರು ಯಾವುದೇ ಮಧ್ಯ ಮಾರ್ಗವನ್ನು ಒಪ್ಪಲು ಸಿದ್ಧರಿಲ್ಲದ ನಾಯಕರಾಗಿದ್ದರು. ಇಂಗ್ಲಿಷ್ ಸರ್ಕಾರದ ನ್ಯಾಯ ಪದ್ಧತಿಯನ್ನು, ಶಿಕ್ಷಣ ನೀತಿಯನ್ನು, ಕಂದಾಯ ಪದ್ಧತಿಯನ್ನು ಇತ್ಯಾದಿಯಾಗಿ ಎಲ್ಲವನ್ನೂ ತಿರಸ್ಕರಿಸುತ್ತಿದ್ದ ತಿಲಕರು ಅವೆಲ್ಲಕ್ಕೂ ಪರ್ಯಾಯವಾಗಿ ಭಾರತೀಯ ಪದ್ಧತಿಯನ್ನು ಜಾರಿಗೆ ತರಲು ಪ್ರಯತ್ನಿಸಿದರು.

ತಿಲಕರ ಜೀವನದಿಂದ ಇಂದಿನಯುವಕರು ಬಹಳಷ್ಟು ಕಲಿಯುವುದಿದೆ, ತಿಳಿಯುವುದಿದೆ ಮತ್ತು ಮಾಡುವುದಿದೆ. ತಿಲಕರು ಕಷ್ಟಗಳನ್ನು ಅನುಭವಿಸಬೇಕಾಗಿ ಬಂದಾಗಲೆಲ್ಲ ಅವುಗಳಿಂದ ತಪ್ಪಿಸಿಕೊಳ್ಳಲು ಅವರ ಸ್ನೇಹಿತರು ಸುಲಭೋಪಾಯ ವನ್ನು ಸೂಚಿಸಿದಾಗ ತಿಲಕರು ಒಂದು ಮಾತನ್ನು ಹೇಳುತ್ತಿದ್ದರು. "ನಾನು ಬದುಕುವುದಕ್ಕೆ ಮಾತ್ರ ಊಟ ಮಾಡುತ್ತೇನೆ!'' ತಿಲಕರ ಜೀವನದ ಗುರಿ ದೇಶಕ್ಕೆ ಸ್ವರಾಜ್ಯ ತರುವುದೇ ಆಗಿತ್ತು ಅದಕ್ಕಾಗಿ ಅವರು ಯಾವ ಒಪ್ಪಂದಕ್ಕೂ ಸಿದ್ಧರಾಗಿರಲಿಲ್ಲ. ಬಾಲ್ಯದಲ್ಲಿಯೂ, ಯೌವನದಲ್ಲಿಯೂ, ವೃದ್ಧಾಪ್ಯದಲ್ಲಿಯೂ ತಿಲಕರು ಪ್ರೀತಿಸಿದ ಒಂದೇ ಒಂದು ವಿಷಯುವೆಂದರೆ ದೇಶದ ಸ್ವಾತಂತ್ರ್ಯ. ತಿಲಕರು ಆಗರ್ಭ ಶ್ರೀಮಂತರಾಗಿರಲಿಲ್ಲ, ಹಣಗಳಿಸುವ ಉದ್ಯೋಗಸ್ಥರೂ ಆಗಿರಲಿಲ್ಲ. ಅವಶ್ಯವಿದ್ದಷ್ಟೇ ತೆಗೆದುಕೊಂಡು ದೇಶಸೇವಾವ್ರತಬದ್ಧರಾದ ಸಂಸಾರಿಯಾಗಿದ್ದರು. ಅವರು ನ್ಯಾಯಶಾಸ್ತ್ರ ಪಂಡಿತರಾಗಿದ್ದರೂ ಸಹ ಆ ವಿದ್ಯೆಯನ್ನು ಇಂಗ್ಲಿಷ್ ಸರ್ಕಾರದ ಅನ್ಯಾಯಪೂರಿತ ಕ್ರಮಗಳ ವಿರುದ್ಧ ಹೋರಾಡಲು ಹಾಗೂ ತಮ್ಮ ಮೇಲೆ ಇಂಗ್ಲಿಷರು ಹೂಡುವ ಮೊಕದ್ದಮೆಯ ವಿರುದ್ಧ ವಾದ ಮಾಡಿ ನ್ಯಾಯ ಪಡೆಯಲು ಉಪಯೋಗಿಸಿದರೇ ಹೊರತು ತಮ್ಮ ಹೊಟ್ಟೆಪಾಡಿಗಾಗಿ ಉಪಯೋಗಿಸಲಿಲ್ಲ. ತಿಲಕರ ಜ್ಞಾನದ ವಿಸ್ತಾರ

ಬಹು ವ್ಯಾಪಕವಾಗಿತ್ತು. ಅದು ಅಧ್ಯಾತ್ಮಿಕ ವಿಚಾರವನ್ನೂ, ಶಿಕ್ಷಣವಿಚಾರವನ್ನೂ, ನ್ಯಾಯಾಧಿಕರಣದ ವಿಚಾರವನ್ನೂ, ಆರ್ಥಿಕ ವಿಚಾರವನ್ನೂ ಒಳಗೊಂಡಿತ್ತು. ಅವರು ಗಣಿತ ಪ್ರಿಯರಾಗಿದ್ದುದರಿಂದ ಯಾವುದೇ ವಿಷಯವನ್ನು ಮಂಡಿಸಲಿ ಅದನ್ನು ತರ್ಕಬದ್ಧವಾಗಿ ಮಂಡಿಸುವುದರ ಜೊತೆಗೆ ಅಂಕಿ-ಸಂಖ್ಯೆಗಳ ಆಧಾರವನ್ನೂ ಉಪಯೋಗಿಸಿ ತಮ್ಮ ವಾದಕ್ಕೆ ಜಯ ಪಡೆಯುವುದರಲ್ಲಿ ನಿಸ್ಸೀಮರಾಗಿದ್ದರು. ಆದ್ದರಿಂದ ಇಂಗ್ಲಿಷ್ ಸರ್ಕಾರ ತಿಲಕರ ಬಗ್ಗೆ ಭಯವನ್ನು ಹೊಂದಿತ್ತು ಮತ್ತು ಹೇಗಾದರೂ ಮಾಡಿ ಅವರನ್ನು ತನ್ನ ಉದ್ಧಟತನದ ದಾರಿಯಿಂದ ಹೋಗಲಾಡಿಸಲು ಪ್ರಯತ್ನಿಸುತ್ತಿತ್ತು. ಆದರೆ ತಿಲಕರು ಇಂಗ್ಲಿಷ್ ಸರ್ಕಾರದ ಯಾವುದೇ ಕಿರುಕುಳಕ್ಕೆ ಸೋಲನ್ನೊಪ್ಪುವವರಾಗಿರಲಿಲ್ಲ. ಬರುವ ಒಂದೊಂದು ತೊಂದರೆಯೂ ತಿಲಕರನ್ನು ಇಮ್ಮಡಿ ಉತ್ಸಾಹಿ ಹೋರಾಟಗಾರನನ್ನಾಗಿ ಮಾಡುತ್ತಿತ್ತೆಂದರೆ ಎಂಥವರಿಗೂ ಆಶ್ಚರ್ಯವಾಗುತ್ತಿತ್ತು. "ಪುನಶ್ಚಹರಿಃ ಓಂ" ಎಂದು ತಮ್ಮ ಕೆಲಸವನ್ನು ಪುನರಾರಂಭಿಸುತ್ತಿದ್ದರು. ಅವರು ಸಾಯುವ ಕೊನೆಯ ಅವಧಿಯುವರೆಗೂ ಕಾರ್ಯತತ್ಪರರಾಗಿದ್ದರು. ಅವರು ಯಾವ ಅಧಿಕಾರವನ್ನೂ, ಸಂಪತ್ತನ್ನೂ ಬಯಸದೆ ತಮ್ಮ ೬೪ ವರ್ಷಗಳನ್ನೂ ದೇಶ ಸೇವೆಗಾಗಿ ವಿನಿಯೋಗಿಸಿದರು. ಅವರ ಯಾವ ಕರ್ಮದ ಹಿಂದೆಯೂ ಫಲವಾಸನೆ ಇರಲಿಲ್ಲ. "ಇಹಲೋಕದಲ್ಲಿ ಕರ್ಮ ಮಾಡುತ್ತ ಮಾಡುತ್ತ ನೂರು ವರ್ಷ ಬದುಕಲು ಬಯಸಬೇಕು. ದೇಹಧಾರಿಯಾದವನಿಗೆ ಇದೇ ಮಾರ್ಗ. ಬೇರೆ ಯಾವ ಮಾರ್ಗವೂ ಇಲ್ಲ" ಎಂಬ ಈಶಾವಾಸ್ಯದ ಆಶಯವನ್ನು ಪೂರ್ತಗೊಳಿಸಿದ ಮಹಾನ್ ವ್ಯಕ್ತಿ ತಿಲಕರು.

ಮಹಾತ್ಮಾ ಗಾಂಧೀ ದಕ್ಷಿಣ ಆಫ್ರಿಕಾಕ್ಕೆ ಹೋಗಿ ನಡೆಸಿದ ಹೋರಾಟ ವಿದೇಶಿ ಜನರ ಮಧ್ಯೆ, ವಿದೇಶಿ ಸರ್ಕಾರದ ವಿರುದ್ಧ. ಆದರೆ ತಿಲಕರು ನಡೆಸಿದ ಹೋರಾಟ ಸ್ವದೇಶಿ ಜನರ ಮಧ್ಯೆ ಇದ್ದುಕೊಂಡು ವಿದೇಶಿ ಸರ್ಕಾರದ ವಿರುದ್ಧದ ಹೋರಾಟ. ದಕ್ಷಿಣ ಆಫ್ರಿಕಾದಲ್ಲಿಯ ಜನತೆ ಗಾಂಧೀಯುವರನ್ನು ನಾಯಕರನ್ನಾಗಿ ಒಪ್ಪಿಕೊಂಡು ಅವರ ಮಾರ್ಗದರ್ಶನದಲ್ಲಿ ಹೋರಾಟ ಮಾಡಲು ಸಿದ್ಧವಾಯಿತು. ಆದರೆ ಭಾರತದಲ್ಲಿಯಾದರೋ ತಿಲಕರು ವಿದೇಶಿ ಸರ್ಕಾರದೊಡನೆ ಹೋರಾಟ ಮಾಡುವ ಸಮಯದಲ್ಲಿಯೇ ಅನೇಕ ಭಾರತೀಯರಲ್ಲಿದ್ದ ವಿದೇಶಿ ವ್ಯಾಮೋಹದ ವಿರುದ್ಧವೂ ಹೋರಾಟ ಮಾಡಬೇಕಾಗಿ ಬಂತು. ತಿಲಕರನ್ನು ಭಾರತೀಯರು ಲೋಕಮಾನ್ಯ ಎಂದು ಕರೆಯುವ ಹೊತ್ತಿಗೆ ಅವರು ಜೀರ್ಣರಾಗಿದ್ದರು. ಅವರು ತಮ್ಮ ೫೨ನೇ ವಯಸ್ಸಿನಲ್ಲಿ ಬರ್ಮಾದ ಮಂಡಾಲೆಯಲ್ಲಿ ಆರು ವರ್ಷ ಸೆರೆಮನೆವಾಸ ಅನುಭವಿಸಬೇಕಾಯಿತು.

"ಸ್ವರಾಜ್ಯ ನನ್ನ ಜನ್ಮಸಿದ್ಧಹಕ್ಕು" ಎಂದು ತಿಲಕರು ೧೯೦೬ರಲ್ಲಿ ಘೋಷಿಸಿದಾಗ ಭಾರತದ ಸಾಮಾನ್ಯ ಸ್ಥಿತಿ ಎಲ್ಲ ದೃಷ್ಟಿಯಿಂದಲೂ ಅಧಃ ಪತನಗೊಂಡಿತ್ತು. ದೇಶದ ಹಿತದ ಬಗ್ಗೆ ಏನೇ ಮಾತನಾಡಲಿ ಅಥವಾ ಬರೆಯಲಿ ಅದನ್ನು ಇಂಗ್ಲಿಷ್ ಸರ್ಕಾರ

ರಾಜದ್ರೋಹವೆಂದೇ ಪರಿಗಣಿಸುತ್ತಿತ್ತು ಮತ್ತು ಕಾರಾಗೃಹಕ್ಕೆ ಅಟ್ಟುವ ಸನ್ನಾಹ ಮಾಡುತ್ತಿತ್ತು. ತಿಲಕರು ತಮ್ಮ ಕೇಸರಿ ಮತ್ತು ಮರಾಠಾ ಪತ್ರಿಕೆಗಳಲ್ಲಿ ಭಾರತೀಯರ ಹಕ್ಕುಗಳ ಬೇಡಿಕೆಗಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ಅವ್ಯಾಹತವಾಗಿ ಬರೆದರು. ಅವರು ಹಾಗೆ ಬರೆದಾಗಲೆಲ್ಲ ಅವರ ಒಂದು ಕಾಲು ಕಾರಾಗೃಹದಲ್ಲಿರುತ್ತಿತ್ತು. ತಲೆಯ ಮೇಲೆ ಶಿಕ್ಷೆಯ ಕತ್ತಿ ನೇತಾಡುತ್ತಿತ್ತು. ತಿಲಕರು ದೂರದೃಷ್ಟಿಯ ನಾಯಕರಾಗಿದ್ದರು. ಅವರು ಆಗಲೇ ಸ್ವಾತಂತ್ರ್ಯ ಮತ್ತು ಸ್ವರಾಜ್ಯ ಎಂಬೀ ಪದಗಳನ್ನು ವಿಶೇಷ ಅರ್ಥದಲ್ಲಿ ಉಪಯೋಗಿಸಲು ಪ್ರಾರಂಭಿಸಿದ್ದರು. ಅವರ ದೃಷ್ಟಿಯಲ್ಲಿ ಇವೆರಡೂ ಒಂದೇ ಅರ್ಥ ಕೊಡುವ ಎರಡು ಬೇರೆ-ಬೇರೆ ಶಬ್ದಗಳಾಗಿರದೆ ಅವೆರಡೂ ತೀರಾ ಭಿನ್ನ ಅರ್ಥ ಕೊಡುವ ಎರಡು ಪ್ರತ್ಯೇಕ ಶಬ್ದಗಳಾಗಿದ್ದವು.

ಆದಾಗ್ಯೂ ತಿಲಕರು ಸ್ವಾತಂತ್ರ್ಯ ಮತ್ತು ಸ್ವರಾಜ್ಯದ ಗಳಿಕೆಗಾಗಿ ಏಕಕಾಲದಲ್ಲಿಯೇ ಹೋರಾಡಿ ಭಾರತದ ಅದ್ವಿತೀಯ ನಾಯಕರೆನಿಸಿ ಹೆಗ್ಗಳಿಕೆಗೆ ಪಾತ್ರರಾದರು. ಈ ಸ್ವಾತಂತ್ರ್ಯ ಮತ್ತು ಸ್ವರಾಜ್ಯ ಎಂಬ ಶಬ್ದಗಳು ತಿಲಕರ ಅವಸಾನದ ೬೮ ವರ್ಷಗಳ ನಂತರವೂ ಭಾರತೀಯರಿಗೆ ಇನ್ನೂ ಅರ್ಥವಾಗಿಲ್ಲವೆನ್ನುವುದು ಐತಿಹಾಸಿಕ ಸತ್ಯವಾಗಿದೆ. ಒಂದುವೇಳೆ ಈ ಶಬ್ದಗಳೊಳಗಿರುವ ಭಾವನೆಯನ್ನು ಭಾರತೀಯರು ಅರ್ಥ ಮಾಡಿಕೊಂಡಿದ್ದಿದ್ದರೆ ಈಗ ಬಹು ಜನಪ್ರಿಯ ಶಬ್ದಗಳಾಗಿರುವ ಖಾಸಗೀಕರಣ ಮತ್ತು ವಿಶ್ವೀಕರಣ ಇವುಗಳ ಸೃಷ್ಟಿಯಾಗುತ್ತಿರಲಿಲ್ಲ. ಅಲ್ಲದೆ, ಇವೆರಡೂ ಶಬ್ದಗಳೂ ತಿಲಕರ ಹೃದಯದಾಳದ ಮಾತುಗಳಾಗಿದ್ದ ಸ್ವಾತಂತ್ರ್ಯ ಮತ್ತು ಸ್ವರಾಜ್ಯಕ್ಕೆ ವ್ಯತಿರಿಕ್ತವಾದ ಶಬ್ದಗಳಾಗಿ ಪ್ರಚುರಗೊಳ್ಳುತ್ತಿರಲಿಲ್ಲ. ಹೆಚ್ಚು-ಹೆಚ್ಚಿನ ಖಾಸಗೀಕರಣದಿಂದ ಭಾರತೀಯ ತನ್ನ ಕ್ರಿಯಾಶೀಲತೆಯ ಅಭಿವ್ಯಕ್ತಿಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿದ್ದರೆ, ಹೆಚ್ಚು-ಹೆಚ್ಚಿನ ವಿಶ್ವೀಕರಣದಿಂದ ಭಾರತ ತನ್ನ ಸ್ವರಾಜ್ಯವನ್ನು ಕಳೆದುಕೊಳ್ಳುತ್ತಿದೆ. ಇವೆರಡರ ಪರಿಣಾಮವಾಗಿ ಇಂದು ಭಾರತ ತನ್ನ ಆರ್ಥಿಕ ಸ್ವಾತಂತ್ರ್ಯವನ್ನೂ ಕಳೆದುಕೊಂಡಿದೆ.

ತಿಲಕರ ಅಭಿಪ್ರಾಯದಲ್ಲಿ ಸ್ವಾತಂತ್ರ್ಯವೆಂಬುದಕ್ಕೆ ಇಂಗ್ಲಿಷರ ರಾಜಕೀಯ ಆಡಳಿತದಿಂದ ಬಿಡುಗಡೆಯಾಗುವುದೆಂಬ ಅರ್ಥವಿದ್ದರೆ; ಸ್ವದೇಶಿ ಆಂದೋಲನದ ಮೂಲಕ ಭಾರತ ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಿಕೊಳ್ಳಬೇಕೆಂದು ಅವರ ಸ್ವರಾಜ್ಯ ಶಬ್ದದ ಅರ್ಥವಾಗಿತ್ತು.

ಈ ಕುರಿತು ತಿಲಕರು ವಂಗ ಭಂಗವಾದ ತರುಣದಲ್ಲಿಯೇ ಅಂದರೆ ೧೯೦೫ರಲ್ಲಿ ನಡೆಸಿದ ಸ್ವದೇಶಿಚಳುವಳಿಯ ಬಿರುಸನ್ನು ಗಮನಿಸಿದರೆ ತಿಲಕರು ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಎಂದು ಯಾವ ಅರ್ಥದಲ್ಲಿ ಹೇಳಿದರೆಂಬುದು ಗೊತ್ತಾಗುತ್ತದೆ. ತಿಲಕರ ಆ ಸ್ವದೇಶೀ ಚಳುವಳಿಯ ಒಂದು ಕಿರು ನೋಟ ಇಲ್ಲಿದೆ:-

ತಿಲಕರು ಸ್ವದೇಶೀ ಪುರಸ್ಕಾರ, ಪರದೇಶಿ ಬಹಿಷ್ಕಾರಗಳ ಬಿರುಗಾಳಿಯನ್ನೆಬ್ಬಿಸಿದರು. ಎಲ್ಲ ವರ್ಗಗಳ ಜನರನ್ನು ತಿಲಕರು ಉಪಯೋಗಿಸಿದರು.

ಉಪನ್ಯಾಸಕರನ್ನು ಹಳ್ಳಿ ಹಳ್ಳಿಗೆ ಕಳುಹಿಸಿದರು. ಕೀರ್ತನಕಾರರನ್ನೂ, ಪುರಾಣಿಕರನ್ನೂ ಈ ಕ್ಷೇತ್ರಕ್ಕೆ ಎಳೆದರು. ವ್ಯಾಪಾರಸ್ಥರನ್ನು ಹುರಿದುಂಬಿಸಿ ಸ್ವದೇಶಿ ವಸ್ತು ಭಂಡಾರವನ್ನು ಪ್ರಾರಂಭ ಮಾಡಿಸಿದರು. ನೇಕಾರರಿಗೆ ಸ್ವದೇಶಿ ಮಹತ್ವವನ್ನು ತಿಳಿಸಿ ಉತ್ತೇಜನವಿತ್ತರು. ಸ್ವದೇಶಿ ಪ್ರತಿಜ್ಞೆಯನ್ನು ಕೈಗೊಳ್ಳಲು ರಾಷ್ಟ್ರಕ್ಕೆ ಕರೆಯಿತ್ತರು. ಹಳ್ಳಿ ಹಳ್ಳಿಗೂ ಸ್ವದೇಶಿ ಸಂದೇಶ ಮುಟ್ಟಿ ಸ್ವದೇಶಿ ಅಂಗಡಿಗಳು ಪ್ರಾರಂಭವಾದವು. ೧೯೦೬ರಲ್ಲಿ ಪಂಢರಾಪುರದಲ್ಲಿ ಒಂದು ದೊಡ್ಡ ಸ್ವದೇಶಿ ಪ್ರದರ್ಶನ ಏರ್ಪಡಿಸಿದರು. ಮುಂಬಯಿಯಲ್ಲಿ ಸ್ವದೇಶಿ ಕೋ-ಆಪರೇಟಿವ್ ಸ್ಟೋರ್ ಪ್ರಾರಂಭಮಾಡಿದರು. ಅದೇ ವರ್ಷದಲ್ಲಿ ಸಾರ್ವಜನಿಕ ಸಭೆಯ ಮುಖಾಂತರ ವಿದ್ಯಾರ್ಥಿಗಳ ಪ್ರಚಂಡ ಸಭೆ ಜರುಗಿತು. ಈ ಸಭೆಗೆ ತಿಲಕರೇ ಅಧ್ಯಕ್ಷರಾಗಿದ್ದರು. ಸ್ವದೇಶಿವಸ್ತುಗಳನ್ನು ಧರಿಸುವ ಪ್ರತಿಜ್ಞೆಮಾಡಲ್ಪಟ್ಟಿತು. ಬಂಗಾಲದಲ್ಲಿ ಆದಂತೆ ಪರದೇಶಿ ವಸ್ತ್ರಗಳ ಹೋಳಿಯೂ ನಡೆಯಿತು. ಈ ಚಳುವಳಿಯಲ್ಲಿಯೇ ಸಾವರ್ಕರರು ಜನರ ಮುಂದೆ ಬಂದರು. ಬಹಿಷ್ಕಾರವು ಕೇವಲ ಬಟ್ಟೆಗೆ ಮಾತ್ರ ಉಳಿಯಲಿಲ್ಲ. ಅದಕ್ಕೆ ಹಿಷ್ಕಾರಯೋಗವೆಂಬ ಹೆಸರಿಟ್ಟು ಅದರ ವ್ಯಾಪ್ತಿಯು ಪರದೇಶಿವಸ್ತುಗಳನ್ನು, ಪರದೇಶಿ ರೀತಿ-ನೀತಿಗಳನ್ನು, ಪರದೇಶಿ ಸರ್ಕಾರವನ್ನೂ ಕೂಡ ವ್ಯಾಪಿಸುವಂತೆ ಹಿಗ್ಗಿಸಿದರು. ಬಹಿಷ್ಕಾರದಿಂದ ಮ್ಯಾಂಚೆಷ್ಟರ್‌ನ ವ್ಯಾಪಾರವೆಲ್ಲ ಹಾಳಾಗಿ ಹೋಗಿದೆ ಎಂದು ಇಂಗ್ಲಿಷ್‌ಮನ್ ಪತ್ರಿಕೆ ಬರೆಯಿತು.

ಬಂಗಾಲದ ಅರವಿಂದಘೋಷರು, ಬಿಪಿನ್ ಚಂದ್ರಪಾಲರು, ಮೋತಿಲಾಲ್ ಘೋಷ್ ಮುಂತಾದವರು ಸಹ ಹೋರಾಟ ಹೂಡಿದರು. ರ್‍ಯಾಮ್‌ಸೇ ಮ್ಯಾಕ್‌ಡೊನಾಲ್ಡ್, "ನಿಮ್ಮ ಗುರಿ ಏನು?" ಎಂದು ಅರವಿಂದರನ್ನು ಕೇಳಿದೊಡನೆಯೆ ಅರವಿಂದರು "ಸಂಪೂರ್ಣ ಸ್ವಾತಂತ್ರ್ಯವೆ ನಮ್ಮ ಗುರಿ" ಎಂದು ಥಟ್ಟನೆ ಹೇಳಿಬಿಟ್ಟರು.

ಸ್ವದೇಶಿ ಹಾಗೂ ಬಹಿಷ್ಕಾರದ ಪರಿಣಾಮವಾಗಿ ಬಂಗಾಲದಲ್ಲಿ ಅನೇಕ ಬಗೆಯ ವಿಧೇಯಕ ಕಾರ್ಯಗಳು ನಡೆದವು. ದೇಶೀ ಸೋಪುಕಾರ್ಖಾನೆಗಳು, ಬೆಂಕಿಕಡ್ಡಿಕಾರ್ಖಾನೆಗಳು ಪ್ರಾರಂಭವಾದವು. ಸ್ವದೇಶೀ ನೇಕಾರರು ಸ್ವದೇಶಿ ಚಳುವಳಿಯಿಂದ ತಮಗೆ ಬಹಳ ಲಾಭವಾಗಿದೆ ಎಂದು ಸಾರ್ವಜನಿಕವಾಗಿ ಸಾರಿದರು.

ಮುಂದೆ ಇಂಥದೆ ಚಳುವಳಿಯನ್ನು ಗಾಂಧೀ ಪ್ರಾರಭಿಸಿದರು ಮತ್ತು ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರು. ಹೀಗೆ ತಿಲಕ್ ಮತ್ತು ಗಾಂಧಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ದೇಶವನ್ನು ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಆರ್ಥಿಕ ಸ್ವಾತಂತ್ರ್ಯವನ್ನೂ ಪಡೆಯುವಂತೆ ಮಾಡಿದರಾದರೂ ಇಂದಿನ ರಾಜಕಾರಣಿಗಳು ದೇಶವನ್ನು ಅಮೇರಿಕಾದ ಆರ್ಥಿಕ ಸಾಮ್ರಾಜ್ಯದ ಒಂದು ದಾಸ್ಯ ದೇಶವನ್ನಾಗಿ ಪರಿವರ್ತಿಸಿದ್ದಾರೆ.

ತಿಲಕರು ಮಾಂಡಲೆಕಾರಾಗೃಹದಲ್ಲಿದ್ದಾಗ "ಗೀತಾರಹಸ್ಯ" ಎಂಬ ಬೃಹತ್ ಗ್ರಂಥವನ್ನು ಬರೆದು ತಮ್ಮ ಅಸಾಧಾರಣವಾದ ಆಧ್ಯಾತ್ಮಿಕ ವಿದ್ವತ್ತನ್ನು ಮೆರೆದರು.

ಅದೇ ರೀತಿ ೧೯೦೮ರಲ್ಲಿ ಶಿಕ್ಷೆಗೆ ಒಳಗಾಗಿ ಯರವಾಡ ಜೈಲಿನಲ್ಲಿ ಬಂಧಿಯಾಗಿದ್ದಾಗ ''The Arctic Home of The Vedas'' ಎಂಬ ಹೆಸರಿನಲ್ಲಿ ತಮ್ಮ ಪ್ರಖ್ಯಾತವಾದ ಪ್ರಬಂಧವನ್ನು ಬರೆದರು. ಇಂತಹ ವಿದ್ವತ್ ಕೃತಿಗಳು ಪಾಶ್ಚಿಮಾತ್ಯ ದೇಶದ ವಿದ್ವಾಂಸ ಮ್ಯಾಕ್ಸ್ ಮುಲರ್‌ರ ಗಮನವನ್ನೂ ಸೆಳೆದವು. ಜನಸಾಮಾನ್ಯರಲ್ಲಿ ಸ್ವಾತಂತ್ರ್ಯ ಪ್ರೇಮವನ್ನು ಹುಟ್ಟುಹಾಕಲು ಸಾರ್ವತ್ರಿಕ ಹಬ್ಬವಾದ ಗಣೇಶೋತ್ಸವವನ್ನು ರಾಷ್ಟ್ರೀಯ ಹಬ್ಬವನ್ನಾಗಿ ಮಾಡಿದುದು ಅವರ ಸಮಾಜಧರ್ಮದ ಒಳನೋಟಕ್ಕೆ ಸಾಕ್ಷಿಯಾಗಿದೆ.

ಕರ್ನಾಟಕಕ್ಕೂ ತಿಲಕರಿಗೂ ಸಂಬಂಧವೇರ್ಪಟ್ಟದ್ದು ಕರ್ನಾಟಕದ ಸೌಭಾಗ್ಯ. ತಿಲಕರು ಬೆಳಗಾವಿಗೂ, ಗುರ್ಲಹೊಸೂರಿಗೂ, ಧಾರವಾಡಕ್ಕೂ ಭೇಟಿಕೊಟ್ಟಿದ್ದರು. ತಿಲಕರ ವಿಚಾರದಿಂದ ಪ್ರಭಾವಿತರಾದ ಅನೇಕ ಮಹನೀಯರು ಆಗ ಕರ್ನಾಟಕದಲ್ಲಿದ್ದರು. ಅವರಲ್ಲಿ ಮುಖ್ಯರಾದವರು ಆಲೂರು ವೆಂಕಟರಾಯರು, ಗಂಗಾಧರರಾವ್ ದೇಶಪಾಂಡೆ, ಕಾರವಾರದ ಚಂದಾವರ್ಕರ್, ಮುದವೀಡು ಕೃಷ್ಣರಾಯರು, ಡಾ|| ಹರ್ಡೀಕರರು.

ಇತಿಹಾಸಕಾರ ಎನ್.ಜಿ.ಜೋಗ್ ಬರೆದಿರುವ ಈ ಮಾತುಗಳು ಗಮನೀಯವಾಗಿವೆ. "ತಿಲಕರು ಭಾರತದ ಸ್ವಾತಂತ್ಯಕ್ಕೆ ಬುನಾದಿಯನ್ನು ಹಾಕಿದರು ಅದಿಲ್ಲದಿದ್ದರೆ ಗಾಂಧೀಜೀ ಕಟ್ಟಡವನ್ನು ಎಬ್ಬಿಸಲು ಆಗುತ್ತಿರಲಿಲ್ಲ. ಮಹಾತ್ಮಗಾಂಧಿ ರಾಷ್ಟ್ರಪಿತನಾಗಿರುವಂತೆ ಲೋಕಮಾನ್ಯತಿಲಕರು ಭಾರತದ ರಾಷ್ಟ್ರೀಯವಾದದ ತಂದೆಯಾಗಿದ್ದಾರೆ.''

ಒಬ್ಬ ಸಾಮಾನ್ಯ ಬಾಲಕ ಲೋಕಮಾನ್ಯನಾಗಿ ಬೆಳೆದು ಬಂದ ತಿಲಕರ ಜೀವನ ಭಾರತದ ಸ್ವಾತಂತ್ರ್ಯದ ಇತಿಹಾಸದ ಗಗನದಲ್ಲಿ ಧ್ರುವತಾರೆಯಾಗಿ ಸ್ವರಾಜ್ಯದ ದಾರಿಗೆ ದಿಕ್ಸೂಚಿಯಾಗಿ ಪ್ರಜ್ವಲಿಸುತ್ತಿರುತ್ತದೆ.

(ಪುಟ-8 ರಿಂದ ......)

"ನೀನು ಏನು ಹೇಳುತ್ತಿದ್ದಿ ಎಂಬುದರ ಅರ್ಥವನ್ನು ನೀನು ಮಾಡಿಕೊಳ್ಳುತ್ತಿಲ್ಲ.ಈ ರೀತಿ ಅಂಗವಿಕಲನಾಗಿರುವ ಒಬ್ಬ ವ್ಯಕ್ತಿ ನಮ್ಮ ಕುಟುಂಬದ ಮೇಲೆ ಬಹಳ ದೊಡ್ಡ ಹೊರೆಯಾಗುತ್ತಾನೆ. ನಾವು ನಮ್ಮ ಜೀವನವನ್ನು ನಡೆಸಬೇಕಾಗಿದೆ. ಆದ್ದರಿಂದ ಇಂತಹ ಅನಗತ್ಯವಾದ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳಲು ಸಾಧ್ಯವಿಲ್ಲ. ದಿಲ್ಲಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳಿಲ್ಲವೆ? ಅನಾಥಾಲಯಗಳು ಇಲ್ಲವೆ? ಅವುಗಳು ನಿನ್ನ ಸ್ನೇಹಿತನನ್ನು ನೋಡಿಕೊಳ್ಳಲಿ ನೀನು ಮನೆಗೆ ಬಂದು ಬಿಡು ಮತ್ತು ಆ ಸ್ನೇಹಿತನ ಬಗ್ಗೆ ಚಿಂತೆ ಮಾಡಬೇಡ ಅವನೇ ಹೇಗಾದರೂ ಮಾಡಿ ತನ್ನ ವ್ಯವಸ್ಥೆಯನ್ನು ಮಾಡಿಕೊಳ್ಳುವನು'' ತಂದೆ ಹೇಳಿದರು.

ತಂದೆ ಈ ರೀತಿ ಹೇಳಿದ ಮೇಲೆ ರಾಜೇಶ್‌ನಿಂದ ಯಾವ ಉತ್ತರವೂ ಬರಲಿಲ್ಲ. ಕೆಲವು ದಿವಸಗಳ ನಂತರ ರಾಜೇಶನ ತಂದೆ–ತಾಯಿಗಳಿಗೆ ನಗರ

(ಪುಟ 29ರಲ್ಲಿ ಮುಂದುವರಿದಿದೆ.....)

ಪರಿವರ್ತನಾಶೀಲ ನಾಯಕನೆ ಪರಿವರ್ತನೆಯ ಹರಿಕಾರ

ಅಜಿಂ ಪ್ರೇಮ್‌ಜಿ ವಿಪ್ರೋ ಅಧ್ಯಕ್ಷರು.

(ಇತ್ತೀಚಿಗೆ ಮುಂಬಯಿಯ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟದ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಉದ್ದೇಶಿಸಿ ಮಾಡಿದ ಭಾಷಣ)

ಗಣ್ಯ ಅತಿಥಿಗಳೆ ಮತ್ತು ಸ್ನೇಹಿತರೆ,

ಆರೊಗ್ಯ ಪೂರ್ಣ ಬೆಳವಣಿಗೆಯ ಜೊತೆಗೆ ಸುಸ್ಥಿರತೆಯನ್ನು ಕಾಪಾಡಿಕೊಳ್ಳಬಲ್ಲ ಅರ್ಥವ್ಯವಸ್ಥೆಯನ್ನು ನಾವು ಹೊಂದಿದ್ದೇವೆ. ಒಂದು ದಶಕದ ಹಿಂದೆ ಪ್ರಾರಂಭವಾಗಿದ್ದ ವಿಶ್ವೀಕರಣ ಮತ್ತು ಉದಾರೀಕರಣ ಈಗ ಫಲವೀಯಲು ಪ್ರಾರಂಭಿಸಿವೆ. ಭವಿಷ್ಯವು ಇನ್ನು ಮುಂದೆ ಆಶಾದಾಯಕ ವಾಗಿರುವಂತೆ ತೋರುತ್ತದೆ. ಇಂದಿನಿಂದ ೩೦ ವರ್ಷಗಳೊಳಗಾಗಿ ಭಾರತ ಅಮೇರಿಕಾ ಮತ್ತು ಚೀನಾ ದೇಶಗಳ ನಂತರ ವಿಶ್ವದಲ್ಲಿ ಅತ್ಯಂತ ದೊಡ್ಡ ಅರ್ಥವ್ಯವಸ್ಥೆಯುಳ್ಳ ದೇಶವಾಗುತ್ತದೆಂದು ಒಂದು ವರದಿಯು ತಿಳಿಸುತ್ತದೆ.

ಈ ಗುರಿಯನ್ನು ಸಾಧಿಸಬೇಕಾದರೆ ನಮ್ಮ ಮುಂದೆ ಪರಿವರ್ತನೆಯ ಮಹಾಕಾರ್ಯವಿದೆ.ಪರಿವರ್ತನೆಯ ಲಾಭಗಳು ವ್ಯಾಪಕವಾಗಿ ಹಂಚಿ ಹೋಗುವಂತೆ ಈ ಕಾರ್ಯದ ಜವಾಬ್ದಾರಿಯಾಗಿರುತ್ತದೆ. ಪರಿವರ್ತನೆ ಎಂಬುದು ಪರಿವರ್ತನಾಶೀಲ ನಾಯಕನ ಮನಸ್ಸಿನಲ್ಲಿ ಪ್ರಾರಂಭವಾಗುತ್ತದೆ. ಈ ಪರಿವರ್ತನೆಯು ಸರ್ಕಾರ, ವಾಣಿಜ್ಯ ಮತ್ತು ಸಾಮಾಜಿಕ ನಾಯಕರ ನಾಯಕತ್ವದ ಶೈಲಿಯನ್ನು ಒಳಗೊಂಡಿರುತ್ತದೆ.

ಪರಿವರ್ತನಾಶೀಲನಾಯಕನಗುಣಗಳು;

ಪರಿವರ್ತನಾಶೀಲ ನಾಯಕನ ಯಾವುದೇ ಅಧಿಕಾರವನ್ನಾಗಲಿ, ಮೋಹಕತೆಯನ್ನಾಗಲಿ ಅವಲಂಬಿಸಿರುವುದಿಲ್ಲ. ನಾಯಕತ್ವಕ್ಕೆ ಅಗತ್ಯವಾಗಿರುವ ಗುಣಧರ್ಮಗಳು ಅವನಲ್ಲಿ ಅಂತರ್ಗತವಾಗಿರುತ್ತವೆ. ಇವುಗಳಲ್ಲಿ ಕೆಲವನ್ನು ನಾನು ಸಂಕ್ಷಿಪ್ತವಾಗಿ ತಿಳಿಸಬಯಸುತ್ತೇನೆ. ಮೊದಲನೆಯದಾಗಿ. ಪರಿವರ್ತನಾಶೀಲ ನಾಯಕರು ತಮ್ಮನ್ನು ಪರಿವರ್ತನೆಯ ಹರಿಕಾರರೆಂದು ಗುರ್ತಿಸಿಕೊಳ್ಳುತ್ತಾರೆ. ವಸ್ತುಸ್ಥಿತಿ ಎಷ್ಟೇ ಆರಾಮದಾಯಕವೆಂದು ತೋರಿದರೂ ಅವರು ಅದನ್ನು ಹಾಗೆಯೇ ಇರಗೊಡುವುದಿಲ್ಲ. ಎರಡನೆಯದಾಗಿ, ಅವರು ಧೈರ್ಯಶಾಲಿಗಳು ಮತ್ತು ಮೌಲ್ಯ ಪ್ರೇರಿತರೂ ಆಗಿರುತ್ತಾರೆ. ಹಾಗೆಯೇ ಅವರು ಮುಂದಾಲೋಚನೆಯವರಾಗಿರುತ್ತಾರೆ. ಮತ್ತು ಉತ್ತಮ ಮುನ್ನೋಟವನ್ನು ಹೊಂದಿರುತ್ತಾರೆ. ಉತ್ತಮ ಭವಿಷ್ಯದ ನಿರ್ಮಾಣಕ್ಕಾಗಿ ಕೆಲಸ ಮಾಡಲು ಸಿದ್ಧರಿರುತ್ತಾರೆ. ಮೂರನೆಯದಾಗಿ, ಅವರು ಆಜೀವ ವಿದ್ಯಾರ್ಥಿಗಳಾಗಿರುತ್ತಾರೆ. ಸಂಕೀರ್ಣತೆ ಮತ್ತು ಅನಿಶ್ಚಿತತೆ ಇವುಗಳನ್ನು ಎದುರಿಸಲು

ಅಗತ್ಯವಾದ ಸಾಮರ್ಥ್ಯವನ್ನು ಕ್ರೋಢೀಕರಿಸಿಕೊಳ್ಳುತ್ತಾರೆ. ಬೇರೆಯವರು ಸಂದಿಗ್ಧತೆಯ ಗೊಂದಲದಲ್ಲಿ ದಾರಿಗಾಣದವರಾಗಿದ್ದಾಗ ಅವರಿಗೆ ಮಾರ್ಗದರ್ಶಿಗಳಾಗುವ ಸಾಮರ್ಥ್ಯ ಹೊಂದಿರುತ್ತಾರೆ. ನಾಲ್ಕನೆಯದಾಗಿ, ಪರಿವರ್ತನೆಯ ಹರಿಕಾರರು ಉನ್ನತ ನಿರೀಕ್ಷಣೆಗಳನ್ನು ಮತ್ತು ಮಹತ್ವದ ವಿಚಾರಗಳನ್ನು ಸರಳವಾದ ರೀತಿಯಲ್ಲಿ ತಿಳಿಸಬಲ್ಲವರಾಗಿರುತ್ತಾರೆ.

ಕೊನೆಯದಾಗಿ ಯಾವುದೇ ಸಮಸ್ಯೆಯ ಪರಿಹಾರಕ್ಕೆ ಅಗತ್ಯವಾಗಿ ಬೇಕಾದ ಕ್ರಿಯಾಶೀಲತೆಯನ್ನು ನಿರ್ವಿಸಲು ಅಗತ್ಯವಾದ ಅಧಿಕಾರವನ್ನು ಹಸ್ತಾಂತರಿಸುತ್ತಾರೆ.ಅವರು ಅನೇಕ ಸಮಸ್ಯೆಗಳು ಉಂಟಾಗುವ ಮುನ್ನವೇ ಮತ್ತು ಒಂದು ಗಂಡಾಂತರ ಇನ್ನೊಂದು ಗಂಡಾಂತರವನ್ನು ಕೂಡಿಕೊಳ್ಳುವ ಮುನ್ನವೇ ಅವುಗಳನ್ನು ನಿರೀಕ್ಷಿಸಿರುತ್ತಾರೆ. ಇಂತಹ ಪರಿವರ್ತನಾಶೀಲ ನಾಯಕರೆ ವಿಶಾಲ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಗೆ ಪರಿವರ್ತನೆಯ ಮೂಲ ಸಂಪನ್ಮೂಲಗಳಾಗಿರುತ್ತಾರೆ.

ಪ್ರೇರಕಶಕ್ತಿಗಳು;

ಆರ್ಥಿಕ ಬದಲಾವಣೆಗೆ ಸಂಬಂಧಿಸಿದ ವಿಷಯ ಬಂದಾಗ ನಾವು ಒಂದು ಸಂಗತಿಯನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಇತ್ತೀಚಿಗಿನ ಮಹತ್ತರ ಬದಲಾವಣೆಗಳಲ್ಲಿ ಕೆಲವು ಮೂಲಭೂತ ಸಂಗತಿಗಳು ಬದಲಾವಣೆಗೊಳ್ಳದೆ ಸ್ಥಿರವಾಗಿಯೇ ಉಳಿಯುತ್ತವೆ. ಗುರುತ್ವಾಕರ್ಷಣದ ನಿಯಮದಂತೆ. ಬೇಡಿಕೆ ಮತ್ತು ಪೂರೈಕೆಯ ನಿಯಮಗಳು ಸಮಾನತೆಯನ್ನುಂಟುಮಾಡುವ ದೊಡ್ಡ ಶಕ್ತಿಗಳಾಗಿವೆ. ಇದೇ ಹೊತ್ತಿಗೆ ನಾನು ನನ್ನ ದೃಷ್ಟಿಯನ್ನು ಮುಂದೆ ಹರಿಸಿದಾಗ ಕೆಲವೊಂದು ಅಪರಿವರ್ತಿತ ಗುಣಗಳುಳ್ಳ ಹಾಗೂ ಬದಲಾವಣೆಗಳನ್ನು ತಡೆಯಲು ಪ್ರಯತ್ನಿಸುವ ಶಕ್ತಿಗಳನ್ನು ಕಾಣುತ್ತೇನೆ. ಪರಿವರ್ತನೆಯ ಹರಿಕಾರರು ಈ ಹೊಸ ಆರ್ಥಿಕ ಪ್ರೇರಕಶಕ್ತಿಗಳ ಬಗ್ಗೆ ಜಾಗೃತರಾಗಿರಬೇಕು. ಏಕೆಂದರೆ ಅವು ಅರ್ಥವ್ಯವಸ್ಥೆಯ ಮೇಲೆ ಮಹತ್ತರವಾದ ಪರಿಣಾಮ ಬೀರಬಲ್ಲವು. ಭವಿಷ್ಯದ ಅರ್ಥವ್ಯವಸ್ಥೆಯನ್ನು ಮತ್ತು ವಾಣಿಜ್ಯ ವ್ಯವಹಾರವನ್ನು ನಿರ್ಧರಿಸಬಲ್ಲ ವಿವಿಧ ಗಾತ್ರದ ಮತ್ತು ವಿವಿಧ ಕಾಲ ದಿಗಂತಗಳುಳ್ಳ ಮೂರು ಪ್ರಕಾರದ ಪ್ರೇರಕಶಕ್ತಿಗಳಿವೆ. ಮೊದಲನೆಯ ಪ್ರಕಾರದ್ದು ಅಲ್ಪಾವಧಿಯ ಅಥವಾ ತಕ್ಷಣದ ಪ್ರೇರಕಶಕ್ತಿಗಳಾಗಿವೆ. ಆದರೆ ಇವು ಪ್ರಮುಖವಾಗಿ ಅನೇಕ ಪ್ರಕಾರದ ವಿವಾದಾತ್ಮಕ ಅವಕಾಶಗಳಾಗಿವೆ. ಈ ಅವಕಾಶಗಳು ಅಂತರರಾಷ್ಟ್ರೀಯಮಟ್ಟದಲ್ಲಿವೆ. ಈ ಸಂದರ್ಭದಲ್ಲಿ ಭಾರತೀಯ ಗಣಕಯಂತ್ರಕೈಗಾರಿಕೆಯ ಬೆಳವಣಿಗೆಯ ಅನುಭವವನ್ನು ಜ್ಞಾಪಿಸಿಕೊಳ್ಳಬಹುದು. ಅಮೇರಿಕಾ ಮತ್ತು ಭಾರತೀಯ ಗಣಕ ವೃತ್ತಿಪರರ ಮಧ್ಯದಲ್ಲಿದ್ದ ಶ್ರಮದ ಬೆಲೆಯ ವ್ಯತ್ಯಾಸ ಒಂದು ದೊಡ್ಡ ವಿವಾದಪೂರ್ಣ ಅವಕಾಶವಾಗಿತ್ತು. ಇದರ ಮೇಲೆ ಕೈಗಾರಿಕೆಯ ಪ್ರಾರಂಭದ ಯಶಸ್ಸು ನಿಂತಿತ್ತು. ಅಂಥದೆ ಒಂದು ಅವಕಾಶ ಇಂದು ಬಿ.ಪಿ.ಓ ಕೈಗಾರಿಕೆಯಲ್ಲಿ ಹಾಗೂ ಔಷಧ ಸಂಶೋಧನೆಯಲ್ಲಿ ಉಂಟಾಗಿದೆ.

ಶ್ರಮ ವ್ಯತ್ಯಾಸ ಕೇವಲ ಒಂದು ಪ್ರಕಾರದ ವಿವಾದಾತ್ಮಕ ಅವಕಾಶ. ಈ ಸಂಪರ್ಕಮೂಲದ ಜಗತ್ತಿನಲ್ಲಿ ಯಾವುದೂ ಸಾಮರಸ್ಯಕರವಾಗಿಲ್ಲ, ರಾಷ್ಟ್ರದ ಗಡಿಯಾಚೆ ಅನೇಕ ಪ್ರಕಾರದ ಬೆಲೆ ಮತ್ತು ಮೌಲ್ಯಗಳುಳ್ಳ ಅರ್ಥವ್ಯವಸ್ಥೆ, ಕೈಗಾರಿಕೆಗಳು ಮತ್ತು ಕ್ಷೇತ್ರಗಳಿವೆ.ಅಂಥವೆ ರಾಷ್ಟ್ರದೊಳಗೂ ಇವೆ. ಅವು ಯಾವುದೇ ಸ್ವರೂಪದ್ದಾಗಿರಬಹುದು. ಉದಾಹರಣೆಗೆ, ಬಂಡವಾಳಸಂಗ್ರಹಣೆಯಬೆಲೆ, ತೆರಿಗೆ ವಿವಿಧತೆ ಮತ್ತು ಶಾಸಕೀಯ ಚೌಕಟ್ಟುಗಳು ಇತ್ಯಾದಿ. ತಕ್ಷಣದ ವಾಣಿಜ್ಯ ಅವಕಾಶಗಳು ಈ ಅಲ್ಪಾವಧಿಯ ಪ್ರೇರಕಶಕ್ತಿಗಳಿಂದ ಬರಬಹುದು.

ಯಾವ ಉದ್ಯಮಿಗಳು ಮತ್ತು ವ್ಯವಸ್ಥಾಪಕರು ಈ ತಕ್ಷಣದ ಅವಕಾಶಗಳನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುವರೋ ಅವರು ಹೆಚ್ಚು ಲಾಭ ಮಾಡುವರು. ಆದ್ದರಿಂದ ಈ ಪ್ರೇರಕಗಳು ಪ್ರತಿಯೊಬ್ಬ ವಾಣಿಜ್ಯೋದ್ಯಮಿಯ ಮತ್ತು ವ್ಯವಸ್ಥಾಪಕನ ಮನಸ್ಸಿನಲ್ಲಿರಬೇಕು. ಏಕೆಂದರೆ ಅವು ಯಾವುದೇ ಒಬ್ಬ ವ್ಯಕ್ತಿ ಸ್ಥಳೀಯವಾಗಿ ಕೈಗೊಳ್ಳಬಹುದಾದ ಕುಶಾಗ್ರಮತಿಯ ಮಾರ್ಗದರ್ಶನ ಕೊಡಬಲ್ಲವು.

ವ್ಯಾಪಕ ಪ್ರಭಾವ;

ಭೂಗೋಳಾಧಾರಿತ ರಾಜಕೀಯ ಪರಿಸ್ಥಿತಿಯಲ್ಲಿ ಮಧ್ಯಮಾವಧಿಯ ವಿಷಯದಲ್ಲಿ ತಾಂತ್ರಿಕ ಸಾಧ್ಯತೆಗಳು, ಬದಲಾವಣೆಗಳು ಆರ್ಥಿಕವಾಗಿ ಪ್ರಮುಖ ಪ್ರೇರಕಗಳಾಗಿರುತ್ತವೆ. ಆಯಕಟ್ಟಿನ ಯೋಜನೆಗಾಗಿ ಇರುವ ಸಂಸ್ಥೆಗಳು ಈ ಪ್ರೇರಕ ಶಕ್ತಿಗಳ ಕಡೆಗೆ ಗಮನ ಹರಿಸಬೇಕು. ಆದರೆ ಈ ಪ್ರೇರಕ ಶಕ್ತಿಗಳ ವ್ಯಾಪಕತೆ ಬಹಳವಾಗಿದೆ. ಇವು ಅಲ್ಪಶಕ್ತಿಯ ಪ್ರೇರಕಗಳಂತಲ್ಲ. ಇವು ಲಾಭಗಳಿಕೆಗೆ ತಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡುವುದಿಲ್ಲ. ಅಂತಿಮವಾಗಿ ಶ್ರಮಪಡಲು ಯೋಗ್ಯವಾದ ಶಕ್ತಿಗಳೇ ಆಗಿವೆ. ಕಪ್ಪೆನೆಗೆತ ಸದೃಶವಾದ ಆರ್ಥಿಕಲಾಭಗಳು ಈ ಬಗೆಯ ಪ್ರೇರಕಶಕ್ತಿಗಳಿಂದಲೆ ದೊರೆಯುತ್ತವೆ.

ವಿಶ್ವದ ಪ್ರತಿಯೊಂದು ದೊಡ್ಡ ಕಂಪನಿ ಉದಾಹರಣೆಗೆ ಜಿ. ಇ. ಮೈಕ್ರೊಸಾಫ್ಟ್, ಐ.ಬಿ.ಎಂ. ಅಥವಾ ಫೋರ್ಡ್. ಇವು ಈ ಪ್ರಕಾರದ ಪ್ರೇರಕಶಕ್ತಿಗಳನ್ನು ಉಪಯೊಗಿಸಿಕೊಳ್ಳುವುದರ ಮೂಲಕವೇ ಕಟ್ಟಲ್ಪಟ್ಟಿವೆ. ಸೆಪ್ಟೆಂಬರ್ ೧೧ ರ ನಂತರ ಶೀತಲಯದ್ಧ ಮುಗಿದ ತರುವಾಯ ಮೊಟ್ಟಮೊದಲಬಾರಿಗೆ ಭದ್ರತೆಗಾಗಿ ಮಾಡಲಾಗುವ ಖರ್ಚು ಅರ್ಥವ್ಯವಸ್ಥೆಯ ಕೇಂದ್ರಸ್ಥಾನಕ್ಕೆ ಬಂದಿದೆ. ಮಧ್ಯಮಾವಧಿಯ ಪ್ರೇರಕಶಕ್ತಿಗಳಿಂದಾಗಿ ಶೋಧಿಸುವುದು ಅಗತ್ಯವಾಗಿದೆ. ನೀವು ಅವುಗಳನ್ನು ತಿಳಿದುಕೊಳ್ಳಬಲ್ಲವರಾಗಿದ್ದರೆ ನೀವು ಅವುಗಳ ಆಧೀನವಾಗುವುದರ ಬದಲು ನೀವೇ ಅವುಗಳನ್ನು ನಿಂಯಂತ್ರಿಸಬಲ್ಲಿರಿ. ತಾಂತ್ರಿಕ ಮತ್ತು ರಾಜಕೀಯ ಶಕ್ತಿಗಳು ಬಹು ಮುಖ್ಯವಾದ ಆರ್ಥಿಕ ಪ್ರೇರಕಗಳಾಗಿವೆ. ಆ ಶಕ್ತಿಗಳು ಬದಲಾವಣೆಯ ವೇಗವನ್ನು ಮತ್ತು ಮುಂಬರುವ ಘಟನೆಗಳ ದಿಕ್ಕನ್ನು ಬದಲಾಯಿಸಬಲ್ಲವು.

ಕೊನೆಯಬಗೆಯ ಪ್ರೇರಕಗಳು ದಿರ್ಘಾವಧಿಯ ಪ್ರೇರಕಗಳನ್ನು

ಒಳಗೊಂಡಿರುತ್ತವೆ. ಅವುಗಳ ಪ್ರಭಾವ ದೈನಂದಿನ ವಾಣಿಜ್ಯ ವ್ಯವಹಾರದಲ್ಲಿ ಅನುಭವಕ್ಕೆ ಬರದೇ ಇರಬಹುದು. ಆದರೆ ಅವು ಎಷ್ಟೊಂದು ವ್ಯಾಪಕತೆಯನ್ನು ಹೊಂದಿವೆ ಎಂದರೆ ಮಾನವ ಜೀವನದ ಪ್ರತಿಯೊಂದು ಅಂಗದ ಮೇಲೂ ಪ್ರಭಾವ ಬೀರುತ್ತವೆ. ಈ ಸಂದರ್ಭದಲ್ಲಿ ಸಾಂಘಿಕ ಪ್ರಯತ್ನದ ಅಗತ್ಯವಿರುತ್ತದೆ. ಈ ಪ್ರೇರಕಗಳು ವಿಶ್ವೀಕರಣದ ವ್ಯವಸ್ಥೆಗೆ ಸಂಬಂಧಪಟ್ಟದ್ದಾಗಿರುತ್ತವೆ. ಉದಾಹರಣೆಗೆ, ಅಭಿವೃದ್ಧಿ ಹೊಂದಿದ ವಿಶ್ವದ ಕೆಲಭಾಗಗಳಲ್ಲಿ ಉಂಟಾಗುತ್ತಿರುವ ಜನಸಂಖ್ಯಾ ಒತ್ತಡಗಳನ್ನು ಗಮನಿಸಬಹುದು. ಇಡೀ ಮಾನವಕುಲದ ಇತಿಹಾಸದಲ್ಲಿಯೆ ಇದುವರೆಗೆ ಕಾಣದೇ ಇದ್ದ ಯುವಕರ ಸಂಖ್ಯೆಯನ್ನು ಮೀರಿಸಿದ ವೃದ್ಧರ ಸಂಖ್ಯೆ ಉಂಟಾಗಿದೆ. ಭಾರತದ ಮಟ್ಟಿಗೆ ಈ ಹೊಸ ಪ್ರೇರಕಶಕ್ತಿಗಳು ಯಶಸ್ಸು ಮತ್ತು ಬೆಳವಣಿಗೆಗಾಗಿ ಅಸಾಧಾರಣವಾದ ಅವಕಾಶವನ್ನು ಕಲ್ಪಿಸಿಕೊಡುತ್ತಿವೆ. ಸಂಪೂರ್ಣ ಭಿನ್ನವಾದ ಆರ್ಥಿಕ ಪರಿವರ್ತನೆಯತ್ತ ಹೋಗುವ ಜವಾಬ್ದಾರಿ ನಮ್ಮದಾಗಿದೆ.

ಪ್ರಮುಖ ಸಾಮಾಜಿಕ ಸಮಸ್ಯೆಗಳು;

ಸಾಮಾಜಿಕ ಬದಲಾವಣೆಯ ಬಗ್ಗೆ ಹೇಳುವುದಾದರೆ ನಮ್ಮ ದೇಶವನ್ನು ಅನೇಕ ಸಂಕೀರ್ಣ ವಿಷಯಗಳು ಕಾಡುತ್ತಿವೆ. ನಾನು ಇಲ್ಲಿ ಕೇವಲ ಐದು ವಿಷಯಗಳನ್ನು ಮಾತ್ರ ಎತ್ತಿಕೊಂಡಿದ್ದೇನೆ. ಏಕೆಂದರೆ ಅವುಗಳು ವ್ಯಾಪಕವಾದ ಪರಿಣಾಮವನ್ನುಂಟುಮಾಡುವಂಥವಾಗಿವೆ.

ಮೊದಲನೆಯದಾಗಿ ಪ್ರಾಥಮಿಕ ಶಿಕ್ಷಣ ನಮ್ಮ ಪ್ರಥಮ ಆದ್ಯತೆ ಎಂಬುದು ನನ್ನ ಖಚಿತವಾದ ಮನವರಿಕೆ. ನಮ್ಮ ಅಜಿಂ ಪ್ರೇಮ್‌ಜಿ ಪ್ರತಿಷ್ಠಾನದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕತೆ ಪ್ರಧಾನವಾದ ಕಾರ್ಯಕ್ರಮವಾಗಿದೆ. ೧೪ರ ವಯೋಮಿತಿಯ ೩ಂಕೋಟಿ ಮಕ್ಕಳು ಶಾಲೆಯ ಹೊರಗೆ ಇದ್ದಾರೆ. ಶಿಕ್ಷಣವು ಜನರನ್ನು ಜ್ಞಾನಿಗಳನ್ನಾಗಿ ಮಾಡುತ್ತದೆ, ಮತ್ತು ಅವಕಾಶಗಳು ಅವರಿಗೆ ನಿಕಟವಾಗುತ್ತವೆ.

ಎರಡನೆಯ ವಿಷಯ ಪ್ರಾಥಮಿಕ ಆರೋಗ್ಯ ರಕ್ಷಣೆ. ನಮ್ಮಲ್ಲಿ ಶಿಶುಮರಣ ೧೦೦೦ಕ್ಕೆ ೭ಂರಷ್ಟಿದೆ. ಅದೇ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ೧೦೦೦ಕ್ಕೆ ೧ಂಕ್ಕಿಂತಲೂ ಕಡಿಮೆ ಇದೆ. ಅಸ್ವಸ್ಥತೆಯ ಈ ಪ್ರಮಾಣದೊಂದಿಗೆ ನಿರಕ್ಷರತೆ ಜೊತೆಗೂಡಿ ಕೋಟ್ಯಾವಧಿ ಸಂಖ್ಯೆಯ ನಮ್ಮ ಜನರು ಆರ್ಥಿಕ ಅವಕಾಶಗಳಿಂದ ಪ್ರಯೋಜನಪಡೆಯುವುದರಿಂದ ವಂಚಿತರಾಗುತ್ತಿದ್ದಾರೆ.

ಮೂರನೆಯದಾಗಿ ಭೂ ಒಡೆತನಕ್ಕೆ ಸಂಬಂಧಿಸಿದ ಕಾನೂನುಗಳು, ತೆರಿಗೆಗಳು ಮತ್ತು ಮಾಹಿತಿಪದ್ಧತಿ ಇವುಗಳನ್ನು ಪುನರ್ ವ್ಯವಸ್ಥೆಗೊಳಿಸಬೇಕಾಗಿದೆ. ಭಾರತದ ಶೇ ೯೦ ರಷ್ಟು ಭೂಮಿಯು ಮಾಲೀಕತ್ವದ ವಿವಾದಕ್ಕೊಳಗಾಗಿದೆ. ಸ್ಟಾಂಪ್ ಡ್ಯೂಟಿ ಆಸ್ತಿಯ ಬೆಲೆಯು ೮ ರಿಂದ ೧೫ ಪ್ರತಿಶತವಿದೆ. ಆದ್ದರಿಂದ ಜನರು ಸರ್ಕಾರವನ್ನು ವಂಚಿಸುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಆಸ್ತಿಯ ಮೇಲಿನ ತೆರಿಗೆ ಬಹಳ ಕಡಿಮೆ ಇದೆ, ಮತ್ತು ತೆರಿಗೆ ಸಂಗ್ರಹ ಅದಕ್ಷತೆಯಿಂದ ಕೂಡಿದೆ. ಇವೆಲ್ಲ ಕಾರಣಗಳಿಂದಾಗಿ ಭಾರತದಲ್ಲಿ ಭೂ ಬೆಲೆ

ಏಷಿಯಾದ ಎಲ್ಲಾ ರಾಷ್ಟ್ರಗಳಿಗಿಂತ ಬಹು ಹೆಚ್ಚಾಗಿದೆ. ಸಾಮಾನ್ಯವಾದ ಆದಾಯ ಮತ್ತು ಕಡಿಮೆ ಪ್ರಮಾಣದ ತೆರಿಗೆ ಸಂಗ್ರಹ ನಮ್ಮ ನಾಗರಿಕ ವ್ಯವಸ್ಥೆಗಳನ್ನು ಕಾಪಾಡಿಕೊಂಡು ಬರಲು ಅಡ್ಡಿಯಾಗಿದೆ. ಪರಿಣಾಮಕಾರಿಯಾದ ಭೂ ಸುಧಾರಣೆಗಳು ವಸತಿಸೌಕರ್ಯ ಮತ್ತು ಇತರೆ ಕ್ಷೇತ್ರಗಳಲ್ಲಿಯ ಅಭಿವೃದ್ಧಿಗೆ ಪ್ರೋತ್ಸಾಹ ಕೊಡಬಲ್ಲದು. ಇವೆರಡು ವ್ಯವಸಾಯದ ನಂತರ ಆರ್ಥಿಕ ಕ್ಷೇತ್ರದಲ್ಲಿ ಅತ್ಯಂತ ದೊಡ್ಡ ವಲಯಗಳಾಗಿವೆ. ಅಲ್ಲದೆ ಬಹಳ ದೊಡ್ಡ ಪ್ರಮಾಣದಲ್ಲಿ ಉದ್ಯೋಗಗಳನ್ನು ಸೃಷ್ಟಿಸುವಂಥದ್ದಾಗಿವೆ.

ನಾಲ್ಕನೆಯದಾಗಿ ನಾವು ವಿದ್ಯುತ್ ಶಕ್ತಿಯ ಸದ್ಯದ ಪರಿಸ್ಥಿತಿಯತ್ತ ನಮ್ಮ ಗಮನವನ್ನು ಹರಿಸಬೇಕು.ಅರ್ಥವ್ಯವಸ್ಥೆಯಲ್ಲಿ ವಿದ್ಯುತ್‌ಶಕ್ತಿ ಕ್ಷೇತ್ರವು ಅತ್ಯಂತ ಹೆಚ್ಚು ಸೋರಿಕೆಯ ಕ್ಷೇತ್ರವಾಗಿದೆ. ನಾವು ವಿದ್ಯುತ್ ಶಕ್ತಿಯ ಕಳ್ಳತನವನ್ನು ಮತ್ತು ಸೋರುವಿಕೆಯನ್ನು ತಪ್ಪಿಸಬಹುದಾಗಿದೆ ಮತ್ತು ವಿದ್ಯುತ್ ಉತ್ಪಾದನೆಯ ದಕ್ಷತೆಯನ್ನು ಹೆಚ್ಚಿಸಬೇಕಾಗಿದೆ. ಈ ಮಾತು ವಿದ್ಯುತ್ ಶಕ್ತಿಯ ವಿತರಣೆ ಮತ್ತು ಸಾಗಾಣಿಕೆಗೂ ಅನ್ವಯಿಸುತ್ತದೆ. ಈ ಬದಲಾವಣೆಗಳು ರಾಜ್ಯಗಳ ಖೋತಾ ಅಂದಾಜು ಪತ್ರಗಳ ಮೇಲೆ ಬಹಳಷ್ಟು ಪ್ರಭಾವವನ್ನು ಬೀರಬಲ್ಲವು. ಅಲ್ಲದೆ ವಾಣಿಜ್ಯ ವ್ಯವಹಾರಗಳ ವೆಚ್ಚವನ್ನು ಬಹಳಷ್ಟು ಕಡಿಮೆ ಮಾಡಬಲ್ಲವು. ನಮ್ಮ ದೇಶದಲ್ಲಿ ನಾವು ಯಾವುದೇ ವ್ಯವಹಾರವನ್ನು ಪ್ರಾರಂಭಿಸುವ ಮೊದಲು ಮೊಟ್ಟಮೊದಲು ಮಾಡಬೇಕಾದ ಖರ್ಚು ಜನರೇಟರಿಗೆ ಸಂಬಂಧಿಸಿದ್ದಾಗಿರುತ್ತದೆ!

ಐದನೆಯದಾಗಿ ದೇಶದಾದ್ಯಂತ ನೀರಿನ ಅಭಾವವಿದೆ. ಶೇ ೪೦ ಕ್ಕಿಂತಲೂ ಕಡಿಮೆ ಪ್ರಮಾಣದ ಸಾಗುವಳಿ ಯೋಗ್ಯ ಭೂಮಿಗೆ ಮಾತ್ರ ಭರವಸೆ ಯೋಗ್ಯವಾದ ನೀರಾವರಿ ವ್ಯವಸ್ಥೆ ಇದೆ. ಅಂತರ್ಜಲ ಮಟ್ಟ ಪ್ರತಿವರ್ಷ ಶೇ ೫ ರಷ್ಟು ಇಳಿಮುಖವಾಗುತ್ತಿದೆ. ಮಧ್ಯಮಾವಧಿ ವ್ಯವಸ್ಥೆಯಲ್ಲಿ ನೀರಿನ ಅಭಾವ ವ್ಯವಸಾಯ, ಕೈಗಾರಿಕೆ ಅಥವಾ ನಾಗರಿಕ ಸೌಲಭ್ಯಗಳಾಗಿರಬಹುದು ಎಲ್ಲವೂ ಕುಂಠಿತಗೊಳ್ಳುತ್ತವೆ. ಆದ್ದರಿಂದ ನದಿಗಳ ಜೋಡಣೆಯಂಥ ಹೊಸರೀತಿಯ ಯೋಜನೆಗಳನ್ನು ಮುಂತೆಗೆದುಕೊಂಡು ಹೋಗುವುದು ಅಗತ್ಯ.

ಮುಂದಿನಕಾರ್ಯ ಬಹು ಸವಾಲು ಪೂರ್ಣವಾಗಿದೆ.ಆದರೆ ಆ ವಸ್ತುಸ್ಥಿತಿಯೆ ನಮ್ಮನ್ನು ಪ್ರೇರೇಪಿಸುತ್ತದೆ. ಅಂತಿಮವಾಗಿ ಯಾವುದನ್ನು ನಾವು ಬದಲಾಯಿಸ ಹೊರಟಿದ್ದೇವೆಯೋ ಅದರಿಂದ ನಾವು ಸ್ವತಃ ಬದಲಾಯಿಸಿಕೊಳ್ಳದೆ ವಿಧಿಯಿಲ್ಲ. ನಾವು ನದಿಯಲ್ಲಿ ಹಾರಿದಾಗ ಈಜುವುದನ್ನು ಕಲಿಯಬಹುದು ಅಥವಾ ಕಲಿಯದೆ ಇರಬಹುದು ಆದರೆ ಒದ್ದೆಯಾಗುವುದರಿಂದ ಮಾತ್ರ ತಪ್ಪಿಸಿಕೊಳ್ಳಲಾರೆವು. ನಮ್ಮಲ್ಲಿ ಉಂಟಾಗುವ ಪರಿವರ್ತನೆಯೆ ಎಲ್ಲಕ್ಕಿಂತಲೂ ದೊಡ್ಡ ಬಹುಮಾನವಾಗಿದೆ. ನಮ್ಮ ದೇಶದ ಪರಿವರ್ತನೆಯ ಈ ಯಾತ್ರೆಯಲ್ಲಿ ನೀವು ನನ್ನೊಂದಿಗೆ ಸೇರುವಿರೆಂಬುದನ್ನು ಎದುರು ನೋಡುತ್ತೇನೆ.

(ಸಾಭಾರ : ಡೆಕ್ಕನ್ ಹೆರಾಲ್ಡ್) ಅನು –ಸುರೇಂದ್ರ ಕೌಲಗಿ.

ಕಲಘಟಗಿಯ ವಿಶಿಷ್ಟ ಕಾಲೇಜು

ಬಂದಗದ್ದೆರಾಧಾಕೃಷ್ಣ

(ಈ ಕಾಲೇಜಿಗೆ ಸೇರಿದೊಡನೆ ವಿದ್ಯಾರ್ಥಿಗೆ ಒಂದಿಷ್ಟು ಜಮೀನು ಕೊಡುತ್ತಾರೆ.ಆತ ಅದರಲ್ಲಿ ಕೃಷಿ ಮಾಡಬೇಕು. ವಿವಿಧ ಬೆಳೆ ಬೆಳೆಯಬೇಕು, ಜಾನುವಾರು ಸಾಕಬೇಕು. ಇಲ್ಲಿ ಕೈಕೆಸರು ಮಾಡಿ ಕಲಿಕೆ.)

ಕಾಲೇಜು ಅಂದೊಡನೆ ಗರಿಗರಿ ಬಟ್ಟೆ ಧರಿಸಿ ತರಗತಿಗಳಲ್ಲಿ ಕುಳಿತು ಪಾಠ ಕೇಳುವುದು ಇಲ್ಲವೇ ಕಾಲೇಜು ಮೈದಾನ ಸುತ್ತಿ ಪಾಠ ಕೇಳದೆ ಮನೆಗೆ ವಾಪಸ್ಸಾಗುವುದು ಎಂದು ಕಲ್ಪನೆಯಿದೆ. ವಿಜ್ಞಾನ, ತಂತ್ರಜ್ಞಾನದ ವಿದ್ಯಾರ್ಥಿಗಳಾದರೆ ಅಲ್ಪಸ್ವಲ್ಪ ಪ್ರಯೋಗಾಲಯದ ಕೆಲಸಗಳನ್ನು ಮಾಡುವುದುಂಟು. ಕಾಲೇಜಿಗೆ ಸೇರಿ ಎತ್ತು, ದನಗಳ ಯೋಗಕ್ಷೇಮ ನೋಡುವುದು, ಹೊಲಗದ್ದೆಗಳಲ್ಲಿ ಕೆಲಸ ಮಾಡುವುದು ಅಂದರೇನು? ಹೀಗೂ ಒಂದು ಕಾಲೇಜು ಇರುತ್ತಾ? ಇಂತಹ ಒಂದು ಕಾಲೇಜು ಕರ್ನಾಟಕದ ಕಲಘಟಗಿ ತಾಲ್ಲೂಕಲ್ಲಿ ಇದೆ.

ಕಲಘಟಗಿಯಲ್ಲಿರುವ ಐ. ಎಲ್. ಆರ್. ಡಿ. ಕಾಲೇಜಿಗೆ ಸೇರಿದೊಡನೆ ವಿದ್ಯಾರ್ಥಿಗೆ ಹತ್ತುಗುಂಟೆಯಿಂದ ಅರ್ಧಎಕರೆವರೆಗೆ ಜಮೀನು ಕೊಡುತ್ತಾರೆ. ಈ ಜಮೀನಿನಲ್ಲಿ ಆ ಪ್ರದೇಶದ ಬೆಳೆಗಳು, ತರಕಾರಿಗಳು, ಹಣ್ಣುಗಳು ಮುಂತಾದವನ್ನು ಬೆಳೆಯಬೇಕು. ಎತ್ತು ಹಸುಗಳನ್ನು ಸಾಕಬೇಕು. ಸರ್ಕಾರದ ಗ್ರಾಮಾಭಿವೃದ್ಧಿ ಯೋಜನೆಗಳಲ್ಲಿ ಕುಳಿತು, ಗ್ರಾಮಪಂಚಾಯಿತಿ ನಡೆಸುವ ಗ್ರಾಮಸಭೆಗಳಲ್ಲಿ ಚರ್ಚಿಸಿ, ಅವು ಕಾರ್ಯರೂಪಕ್ಕೆ ಬರುವ ಕ್ರಮಗಳನ್ನು ಅಭ್ಯಾಸ ಮಾಡಬೇಕು. ಲೋಪ ದೋಷಗಳನ್ನು ಟಿಪ್ಪಣಿ ಮಾಡಬೇಕು. ಸರಿಯಾದ ಅಭಿವೃದ್ಧಿ ಕ್ರಮಗಳ ಬಗೆಗೆ ತಿಳಿಸಬೇಕು. ಸಂಜೆ ಆರು ಗಂಟೆಯ ಅನಂತರ ಗ್ರಾಮೀಣ ಮಕ್ಕಳನ್ನು ಒಗ್ಗೂಡಿಸಿ ಗ್ರಾಮಾಭಿವೃದ್ಧಿ ಬಗೆಗೆ ಒಲವು ಮೂಡಿಸುವ ಕೆಲಸ, ಚಟುವಟಿಕೆ ನಡೆಸಬೇಕು. ನಗರಕ್ಕೆ ಹೋಗಿ ಬಿಳಿಯಂಗಿ ಕೆಲಸ ಮಾಡುವುದೇ ಶ್ರೇಷ್ಠ ಎಂಬ ನಂಬಿಕೆ ಹೋಗಲಾಡಿಸಿ ನಮ್ಮ ಹಳ್ಳಿ, ನಮ್ಮೂರ ಕೆರೆಗಳು, ನಮ್ಮೂರ ಹೊಲಗದ್ದೆಗಳು ಪಶುಪಕ್ಷಿಗಳು ಇವನ್ನೆಲ್ಲಾ ಬಾಳಿಸಿಕೊಳ್ಳತ್ತಾ, ನಾನೂ ಬದುಕಬೇಕು. ಇದು ಶ್ರೇಷ್ಠವಾದ ಬದುಕು ಎಂಬುದನ್ನು ಮನಮುಟ್ಟುವಂತೆ ವಿದ್ಯಾರ್ಥಿಗಳಿಗೆ ಹೇಳಬೇಕು. ಇವೆಲ್ಲಾ ಗ್ರಾಮೀಣಾಭಿವೃದ್ಧಿ ಪದವಿ ತರಗತಿಗಳಲ್ಲಿ ಓದುವ, ಅಭ್ಯಾಸ ಮಾಡುವ ವಿಷಯಗಳು.ಇದರ ಜೊತೆಗೆ ಭಾಷೆ ಮತ್ತು ತತ್ವಶಾಸ್ತ್ರ ಮುಂತಾಗಿ ಕರ್ನಾಟಕ ವಿಶ್ವವಿದ್ಯಾನಿಲಯದ ಅಧ್ಯಾಪಕರು ಮತ್ತು ಆಯಾ ಕ್ಷೇತ್ರಗಳಲ್ಲಿ ನುರಿತ ತಜ್ಞರು ಬಂದು ಪಾಠ ಹೇಳುತ್ತಾರೆ. ಚಟುವಟಿಕೆ ನಡೆಸುತ್ತಾರೆ. ಐ.ಎಲ್.ಆರ್.ಡಿ.ಪದವಿ, ಪಿ. ಯು. ಆದ ನಂತರ ಮೂರು ವರ್ಷಗಳ ಬಿ.ಎ.ಬಿ.ಕಾಂ. ಬಿ.ಎಸ್.ಸಿ ಪದವಿಗಳಿಗೆ ಸಮನಾದದ್ದು.

ಬೆಳಿಗ್ಗೆ ೧೦ ಗಂಟೆಯಿಂದ ಪ್ರಾರಂಭವಾಗುವ ತರಗತಿಗಳಿಗೆ ಮಧ್ಯಾಹ್ನ ೧೨

ರಿಂದ ಮೂರು ಗಂಟೆವರೆಗೆ ವಿರಾಮವಿದೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳೇ ಅಡುಗೆ ತಯಾರಿಸಬೇಕು. ಈ ಕೆಲಸಕ್ಕೂ ಗುಂಪು ನಿರ್ಮಿಸಿ, ತಮಗೆ ನೀಡಿದ ಭೂಮಿಯಲ್ಲಿ ಬೆಳೆದ ಬೆಳೆಗಳಿಗೆ ಹೊರತಾಗಿ ಬೇಕಾಗುವ ಆಹಾರ ವಸ್ತುಗಳನ್ನು ಪೇಟೆಯಿಂದ ಖರೀದಿಸುವುದು, ಲೆಕ್ಕ ಇಡುವುದು, ಅಡುಗೆ ತಯಾರಿಸಿ ಬಡಿಸುವುದು ಮುಂತಾಗಿ ವ್ಯವಸ್ಥೆ ನಡೆಯುವಂತೆ ಮಾಡಲಾಗಿದೆ. ಇದೂ ಕೂಡ ಕಾಲೇಜಿನ ಪಠ್ಯ ವಿಷಯವೆಂದೇ ಪರಿಗಣಿಸಲಾಗಿದೆ.

ಇನ್‌ಸ್ಪಿರೇಶನಲ್ ಲೀಡರ್‌ಶಿಪ್ ಫಾರ್ ರೂರಲ್ ಡೆವಲಪ್‌ಮೆಂಟ್ ಕಾಲೇಜ್ ಎಂಬುದು ಐ. ಎಲ್. ಆರ್. ಡಿ. ಯ ಪೂರ್ಣನಾಮ. ಈ ಕಾಲೇಜಿನ ಮತ್ತೊಂದು ವಿಶೇಷವೆಂದರೆ ಕಾಲೇಜಿಗೆ ಸೇರಿದ ವಿದ್ಯಾರ್ಥಿ ಒಂದೇ ಸ್ಥಳದಲ್ಲಿ ಕಲಿಯುವಂತಿಲ್ಲ. ಉತ್ತರ ಕರ್ನಾಟಕದ ಬಯಲುಸೀಮೆ, ಮಲೆನಾಡು, ಕರಾವಳಿ ಪ್ರದೇಶ ಮತ್ತು ಚಿತ್ರದುರ್ಗ, ಬಳ್ಳಾರಿ ಪ್ರದೇಶಗಳೆಂದು ಕರ್ನಾಟಕದ ಎಲ್ಲಾ ರೀತಿಯ ಭೌಗೋಳಿಕ ಪ್ರದೇಶ ವಿದ್ಯಾರ್ಥಿಗೆ ಅರ್ಥವಾಗುವಂತೆ ಮಾಡಲು ಕಾಲೇಜು ಆಡಳಿತ ವ್ಯವಸ್ಥೆ ಅಲ್ಲಿನ ಬೆಳೆಗಳು, ಸಾಮಾಜಿಕ ಜೀವನ, ಹವಾಮಾನ ಮುಂತಾದವನ್ನು ತನ್ನ ಜಾಲದಲ್ಲಿ ಸೇರಿಸಿಕೊಂಡಿದೆ.ಆರು ತಿಂಗಳು, ಒಂದು ವರ್ಷ ಹೀಗೆ ವ್ಯವಸ್ಥಾಪಕರು ಬಯಸಿದಂತೆ ವಿದ್ಯಾರ್ಥಿ ಕಾರವಾರ, ಸಿರ್ಸಿ, ಚಿತ್ರದುರ್ಗ ಜಿಲ್ಲೆ ಮುಂತಾದ ಸ್ಥಳಗಳಲ್ಲಿ ಇರಬೇಕಾಗುತ್ತದೆ.

ಪೂನಾದ ಬಳಿ ರಾಲೇಗಾಂವ್ ಸಿದ್ಧಿಯಲ್ಲಿ ಗ್ರಾಮೀಣಾಭಿವೃದ್ಧಿ ಕೆಲಸವನ್ನು ಮಾಡಿದ್ದಕ್ಕೆ ರಾಷ್ಟ್ರಪ್ರಶಸ್ತಿ ಪುರಸ್ಕೃತರಾದ ಅಣ್ಣಾಹಜಾರೆ ಮತ್ತು ಯೋಗ ತರಬೇತಿ ಶಿಬಿರಗಳನ್ನು ನಡೆಸಿ ಜನರಲ್ಲಿ ಜಾಗೃತಿ ಮೂಡಿಸುತ್ತಿರುವ ಋಷಿ ಪ್ರಭಾಕರ್ ಚಿಂತನೆಗಳಿಂದ ಹುಟ್ಟಿದ ಈ ಕಾಲೇಜು ಯುವಕರ ಮನಸ್ಸುಗಳನ್ನು ಗ್ರಾಮೀಣಾಭಿವೃದ್ಧಿಯತ್ತ ತಿರುಗಿಸುವ ಉದ್ದೇಶ ಇಟ್ಟುಕೊಂಡಿದೆ. ಇಂದು ಪದವಿ ಓದಿದ ವಿದ್ಯಾರ್ಥಿಗಳು ಕೆಲಸಕ್ಕಾಗಿ ನಗರಗಳಲ್ಲಿ ಅಲೆಯುತ್ತಾರೆ. ಕೃಷಿಪದವಿಗಳನ್ನೇ ಪಡೆದ ವಿದ್ಯಾರ್ಥಿಗಳೂ ಇದ್ದಾರೆ. ಅವರೂ ಕೂಡಾ ಬ್ಯಾಂಕು, ಬೀಜಕಂಪನಿಗಳು ಮುಂತಾಗಿ ಬಿಳಿಯಂಗಿ ಕೆಲಸಗಳಲ್ಲಿ ತೊಡಗಿದ್ದಾರೆ. ಮನೆಯಲ್ಲಿ ಸಾಕಷ್ಟು ಕೃಷಿ ಭೂಮಿಯುನ್ನುಳ್ಳ ಕೆಲವರು ಕೃಷಿಗೆ ಇಳಿದಿರಬಹುದು, ಇದು ಬೆರಳೆಣಿಕೆಯಷ್ಟು ಜನ ಮಾತ್ರ. ಆದರೆ ಐ.ಆರ್.ಎಲ್.ಡಿ ಕಾಲೇಜಿನ ಉದ್ದೇಶ ಸಂಪೂರ್ಣ ಗ್ರಾಮಾಭಿವೃದ್ಧಿ.

ಮಹಾರಾಷ್ಟ್ರ, ಕರ್ನಾಟಕ, ಗೋವಾ ಮತ್ತು ಆಂಧ್ರಪ್ರದೇಶದ ವಿದ್ಯಾರ್ಥಿಗಳು ಹಾಲಿ ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಪದವಿ ಅಭ್ಯಾಸದ ನಂತರ ಗ್ರಾಮಗಳಲ್ಲೇ ನೆಲಸಿ ಕೆಲಸ ಮಾಡುವುದಕ್ಕೆ ಸರ್ಕಾರೇತರ ಸಂಘ ಸಂಸ್ಥೆಗಳು ಇವರಿಗೆ ಸಹಕಾರ ನೀಡುತ್ತವೆ.

ನಾವೀಗ ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆ ನೀರು. ಗಿಡಗಳನ್ನು ನೆಡುವುದು, ಕೆರೆಗಳನ್ನು ಜೋಪಾನ ಮಾಡುವುದು ಮುಂತಾದವು ಅಗತ್ಯ ಮಾಡಬೇಕಾದ ಕೆಲಸಗಳು. ಗ್ರಾಮೀಣಾಭಿವೃದ್ಧಿ ಸಂಸ್ಥೆ ಬೈಫ್ ಹಸಿರು ಹಬ್ಬಗಳನ್ನು ಯಶಸ್ವಿಯಾಗಿ ಆಚರಿಸುತ್ತಿವೆ. ಈ ಹಬ್ಬದಲ್ಲಿ ಗಿಡಗಳನ್ನು ನೆಡುವುದಷ್ಟೇ ಕೆಲಸವಲ್ಲ, ನೆಟ್ಟ ಗಿಡಗಳನ್ನು ಪೋಷಿಸಿ

ಬೆಳೆಸುವ ಬಗೆಗೂ ಪ್ರಮಾಣ ಮಾಡಬೇಕಾಗುತ್ತದೆ. ಇಂಥ ಹಬ್ಬಗಳಲ್ಲಿ ಐ.ಎಲ್.ಅರ್.ಡಿ.ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಗಿಡ, ಮರ, ಕೆರೆ,ಕಟ್ಟೆಗಳ ಮಹತ್ವ ಕುರಿತು ರೈತರಿಗೆ ಹೇಳುತ್ತಾರೆ.

ನಮ್ಮ ಗ್ರಾಮಗಳಲ್ಲಿ ಕೃಷಿ ಕೆಲಸಗಳ ಜೊತೆ ಜೊತೆಗೆ,ಮನೆ ಕೆಲಸಗಳ ಜೊತೆ ಜೊತೆಗೆ ಸುಗ್ಗಿಹಾಡು, ಬೀಸುವ ಹಾಡು, ಜೋಜೋ ಹಾಡು ಮುಂತಾಗಿ ಸಾಂಸ್ಕೃತಿಕ ವಾತಾವರಣ ಏರ್ಪಟ್ಟಿರುತ್ತದೆ. ಬಿಡುವಿನ ವೇಳೆಯಲ್ಲಿ ಹುಲಿ ದನ, ಚೆನ್ನೆಮಣೆ ಮುಂತಾದ ಮನಸ್ಸು ಚುರುಕುಗೊಳಿಸುವ ಆಟಗಳಿವೆ. ಚಾಪೆ ನೇಯುವುದು, ಕಸೂತಿ ಹಾಕುವುದು, ಬುಟ್ಟಿ, ಬಟ್ಟೆ ಮುಂತಾಗಿ ನೇಯುವುದು ಚಿತ್ರ ರಚಿಸುವುದು ಮುಂತಾದ ಕೆಲಸಗಳು ಜೀವನಕ್ರಮದಲ್ಲೇ ಹಾಸು ಹೊಕ್ಕಾಗಿವೆ. ಐ.ಎಲ್.ಆರ್.ಡಿ ಕಾಲೇಜಿನ ವಿದ್ಯಾರ್ಥಿಗಳು ಈ ಎಲ್ಲವನ್ನೂ ಅಭ್ಯಾಸ ಮಾಡಬೇಕಾಗುತ್ತದೆ.

ರಾಸಾಯನಿಕಗಳನ್ನು ಬಳಸದ ಕೃಷಿ, ಆದಷ್ಟೂ ರೋಗಗಳಿಂದ ಮುಕ್ತವಾದ ಬೀಜಗಳ ಅಧ್ಯಯನ, ತನ್ನ ಭೂಮಿಗೆ ಒಗ್ಗಬಹುದಾದ ಇತರ ಹೊಸ ಬೆಳೆಗಳ ಶೋಧನೆ, ಕಡಿಮೆ ನೀರಿನಿಂದ ಬೆಳೆಯಬಹುದಾದ ಬೆಳೆಗಳು, ಇವಕ್ಕೆಲ್ಲಾ ಮಾರುಕಟ್ಟೆಯ ಅಧ್ಯಯನ ಮಾಡಬೇಕಾಗುತ್ತದೆ.

ಹೀಗೆ ಹೇಳುವಾಗ ನಗರಗಳು, ಅಲ್ಲಿನ ಕಾಲೇಜುಗಳು, ನಗರಜೀವನ ಮುಂತಾದವುಗಳನ್ನು ವಿರೋಧಿಸುವ ಅಲೋಚನೆಗಳು ಇರುವುದಿಲ್ಲ. ಹಳ್ಳಿಯ ಬೆಳವಣಿಗೆ ಮತ್ತು ಇಲ್ಲಿನ ಪರಿಸರದ ಅಭಿವೃದ್ಧಿಗೆ ಪೂರಕವಾದ ವಸ್ತುಗಳು, ಆಲೋಚನೆಗಳು ನಗರದಿಂದ ಬರುವುದಾದರೆ. ಅದನ್ನು ವಿರೋಧಿಸಬೇಕಿಲ್ಲ. ಆದಷ್ಟೂ ಸ್ವಾವಲಂಬನೆಯತ್ತ ನಮ್ಮ ಅಭಿವೃದ್ಧಿಯ ಕ್ರಮಗಳು ಇರಬೇಕು. ಈ ಚಿಂತನೆಗಳಿಂದ ಗ್ರಾಮೀಣಾಭಿವೃದ್ಧಿಯ ಕೆಲಸ ಪ್ರಾರಂಭವಾಗಬೇಕು. ಇದು ಈ ಕಾಲೇಜಿನ ಮೂಲ ಆಶಯ.

ಭಾರತದ ಹಳ್ಳಿಗಳ ಅಭಿವೃದ್ಧಿಯೇ ಭಾರತದ ಅಭಿವೃದ್ಧಿ ಎಂದು ಗಾಂಧೀಜಿ ಹೇಳುತ್ತಿದ್ದರು. ಈಗಿನ ಸರ್ಕಾರಗಳೂ ಹಳ್ಳಿಯ ಅಭಿವೃಧಿಗೆ ಮಹತ್ವ ನೀಡುತ್ತಿವೆ. ಆದರೆ ಹೆಚ್ಚಿನ ಆಸಕ್ತಿ ನಗರಗಳ ಕಡೆಗೇ ಇದೆ. ಹಳ್ಳಿಯ ಜನರು ರಾಜಕೀಯ ಜಾಗೃತಿ ಹೊಂದಿ ಶಾಸಕರು, ಸಂಸದರನ್ನು ಮಾತಾಡಿಸಿ, ಒತ್ತಡಗಳನ್ನು ತಂದು, ಯೋಜನೆಗಳನ್ನು ಕಾರ್ಯಗತ ಮಾಡಿಕೊಳ್ಳಬೇಕಾಗಿದೆ. ಇದೆಲ್ಲದಕ್ಕೆ ಮೊದಲು ನನ್ನ ಹಳ್ಳಿ ಹೇಗಿರಬೇಕು? ಈಗ ಹೇಗಿದೆ? ಮಾಡಬೇಕಾದ ಕೆಲಸಗಳೇನು? ಮುಂತಾಗಿ ಯೋಜನೆ ರೂಪಿಸಿಕೊಂಡು ಕಾರ್ಯರೂಪಕ್ಕೆ ಇಳಿಸಲು ಜನಪ್ರತಿನಿಧಿಗಳನ್ನು, ಅಧಿಕಾರಿಗಳನ್ನು ಮನ ಒಲಿಸಬೇಕು. ಬೈಫ್, ಗ್ರೀನ್ ಪ್ರತಿಷ್ಠಾನ ಮುಂತಾದ ಸಂಸ್ಥೆಗಳು ಹೀಗೆ ಕೆಲಸ ಮಾಡಿತ್ತಿವೆ. ಐ.ಎಲ್.ಅರ್.ಡಿ ವಿದ್ಯಾರ್ಥಿಗಳೂ ಹೀಗೆ ಕೆಲಸಕ್ಕಿಳಿದಾಗ ಗಾಂಧೀಜಿಯವರ ಆಶಯ ಸಾಕಾರಗೊಂಡೀತು.

ಸಾಭಾರ: ಅಡಿಕೆ ಪತ್ರಿಕೆ.

ಉಪೇಕ್ಷಿತ ಸಹಪಠ್ಯ ಶಿಕ್ಷಣ

ಸಿ.ಎಂ. ತಿಪ್ಪೇಸ್ವಾಮಿ

ಶಿಕ್ಷಣವೆಂದರೇನು ಎಂಬ ಪ್ರಶ್ನೆಗೆ ಅರವಿಂದರ ಪ್ರಕಾರ ಶಿಕ್ಷಣವೆಂದರೆ ಹೀಗೆ, ರವೀಂದ್ರರ ಪ್ರಕಾರ ಶಿಕ್ಷಣವೆಂದರೆ ಹೀಗೆ, ಗಾಂಧಿಜಿಯವರ ಪ್ರಕಾರ ಹಾಗೆ, ಹರ್ಬಲ್ ಪ್ರಕಾರ ಹೀಗೆ ಎಂದೆಲ್ಲಾ ಹೇಳಿ, ಕೊನೆಗೆ ಎಚ್.ನರಸಿಂಹಯ್ಯನವರು ಹೀಗೆ ಹೇಳಿದರು ಎನ್ನುವವರೆಗೆ ಉಸಿರುಕಟ್ಟಿ ವ್ಯಾಖ್ಯಾನ ಹೇಳಿ ನಿಂತುಬಿಡುತ್ತೇವೆ.

ಇಷ್ಟಲ್ಲಾ ಹೇಳಿದ ನಂತರ ಶಿಕ್ಷಣದ ಬಗ್ಗೆ ಆಸಕ್ತಿಯುಳ್ಳವರನ್ನೊ ಅಥವಾ ಶಿಕ್ಷಣದಲ್ಲಿ ಪದವಿ, ತರಬೇತಿ ಪಡೆದವರನ್ನೊ ಶಿಕ್ಷಣದ ಬಗ್ಗೆ ನಿಮ್ಮದೇ ವ್ಯಾಖ್ಯಾನ ಹೇಳಿ ಎಂದರೆ ಏನೂ ಹೇಳಲು ಉಳಿಯದೆ ಕಣ್ಣು ಬಿಡುವಂತಾಗಿದೆ.... ಅಷ್ಟೊಂದು ವ್ಯಾಖ್ಯಗಳು ಬಂದು ಹೋಗಿವೆ, ಅಷ್ಟೇ ವೈವಿಧ್ಯಮಯವೂ ಆಗಿದೆ. ಇಷ್ಟೆಲ್ಲಾ ಆದ ನಂತರ ಶಿಕ್ಷಣಾರ್ಥಿಗೆ ಶಿಕ್ಷಣವೆಂದರೆ ಕೇವಲ ಓ–ಬ–ಲೆ ಅಷ್ಟೆ! (ಓದು–ಬರಹ–ಲೆಕ್ಕ). ಶಿಕ್ಷಣದ ಲಾಭ ಕೆಲಸ ಪಡೆಯುವುದು ಹಾಗು ಬದುಕಲು ಹಣ ಸಂಪಾದಿಸುವುದು ಅಷ್ಟೇ ಆಗಿದೆ. ವಿಪರ್ಯಾಸವೆಂದರೆ ಶಿಕ್ಷಣಕ್ಕೆ ಈ ಎರಡು ಗುರಿಗಳು ನಗಣ್ಯ. ಅದರ ಗುರಿ ಮಹೋನ್ನತ. ಇಂದಿನ ಶಿಕ್ಷಣ ಕ್ರಮದಿಂದ ಆ ಗುರಿ ಸಾಧನೆ ಶೂನ್ಯಕ್ಕೆ ಹತ್ತಿರ.

ಸದ್ ವ್ಯಕ್ತಿತ್ವದ ಕೊರತೆ;

ನಮ್ಮ ಇಂದಿನ ಶಿಕ್ಷಣದಲ್ಲಿ ಒಂದು ಉನ್ನತ ವ್ಯಾಸಂಗಕ್ಕಾಗಿ ಮೂಲಭೂತ ಕಲಿಕೆಯಾದರೆ ಮತ್ತೊಂದು ವ್ಯಕ್ತಿತ್ವ ರೂಪಿಸಲು ಕಲಿಕೆಯಾಗಿದೆ. ಮೊದಲನೆಯದು ಪಠ್ಯ, ಎರಡನೆಯದನ್ನು ಸಹ ಪಠ್ಯವೆಂದು ಕರೆಯಲಾಗಿದೆ. ಇದರಲ್ಲಿ ಬಹು ಮುಖ್ಯವಾದ ಎರಡನೆಯದು ಉಪೇಕ್ಷೆಗೆ ಗುರಿಯಾಗುವಂಥ ವ್ಯವಸ್ಥೆ ನಿರ್ಮಾಣವಾಗಿ, ಅದರ ಕೊರತೆಯಿಂದಾಗಿ ಸಮಸ್ಯೆಗಳು ನೇರವಾಗಿ ಸಮಾಜವನ್ನು ಕಾಡುವಂತಾಗಿವೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಇಂದು ಶಾಲೆಗಳಿಂದ ಹೊರಬರುವ ವಿದ್ಯಾರ್ಥಿಗಳಿಗೆ ಅಗತ್ಯ ಸದ್‌ವ್ಯಕ್ತಿತ್ವವೇ ಇಲ್ಲದೇ ಬಹುತೇಕರಲ್ಲಿ ಕಳವಳಕಾರಿಯಾದ ಸಮಾಜ ಘಾತುಕ ವ್ಯಕ್ತಿತ್ವ ರೂಪುಗೊಂಡಿದೆ. ನಮ್ಮ ಶಿಕ್ಷಣಕ್ರಮ ವ್ಯಕ್ತಿತ್ವ ನಿರ್ಮಾಣದಲ್ಲಿ ಸೋತಿದೆ. ಇದಕ್ಕೆ ಕಾರಣ ಹಾಗೂ ಸಾಧ್ಯ ಪರಿಹಾರೋಪಾಯದತ್ತ ಗಮನ ಸೆಳೆಯುವುದೇ ನನ್ನ ಉದ್ದೇಶ.

ಸಹ ಪಠ್ಯ ಚಟುವಟಿಕೆಯೆಂದರೆ ಸ್ಥೂಲವಾಗಿ ಪಠ್ಯಪುಸ್ತಕಗಳಿಂದ ಹೊರತುಪಡಿಸಿದ ಇನ್ಯಾವುದೇ ಸೂಕ್ತ ಶಿಕ್ಷಣ. ಸಧ್ಯದಲ್ಲಿ ಪ್ರೌಢಶಾಲಾ ಮಟ್ಟದಲ್ಲಿ ಸಹಪಠ್ಯವೆಂದರೆ ದೈಹಿಕ ಶಿಕ್ಷಣ, ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ, ಮೌಲ್ಯ/ನೀತಿ ಶಿಕ್ಷಣ, ಕಲಾ ಮತ್ತು ಸೃಜನಾತ್ಮಕ ಅಭಿವ್ಯಕ್ತಿ, ಸಾಂಸ್ಕೃತಿಕ ಚಟುವಟಿಕೆಗಳು, ಸಮಾಜ ಸೇವಾ ಕಾರ್ಯಕ್ರಮಗಳು ಮುಂತಾದ ರೀತಿಯ ಯಾವುದೇ ಚಟುವಟಿಕೆ ನಮ್ಮ ಇಂದಿನ ಶಿಕ್ಷಣ ಕ್ರಮದಲ್ಲಿ (ಪ್ರೌಢಶಾಲಾ ಮಟ್ಟಕ್ಕೆ) ವಾರಕ್ಕೆ ಒಟ್ಟು ೪೫ ಅವಧಿಗಳಲ್ಲಿ ೩೪ ಪಠ್ಯಕ್ಕೆ ಹಾಗೂ ಸಹಪಠ್ಯಕ್ಕೆ ನಿಗದಿಯಾಗಿದೆ. ಇವುಇಗಳನ್ನು ಮೊದಲು ಪಠ್ಯ ಹಾಗೂ ಒಠ್ಯೆತರ ಎಂದು ಕರೆಯುತ್ತಿದ್ದು ನಂತರ ಪಠ್ಯೇತರ ಎಂದು ಕರೆಯುತ್ತಿದ್ದು ನಂತರ ಪಠ್ಯೇತರವನ್ನು ಸಹಪಠ್ಯೇತರವೆಂದು ಬದಲಾಯಿಸಿ ಕೈ ಬಿಟ್ಟಿದ್ದಾರೆ. ಮೇಲೆ ಪಟ್ಟಿ ಮಾಡಿದ ಸಹಪಠ್ಯ ಚಟುವಟಿಕೆಗಳನ್ನು ಸಾಕಷ್ಟು ರೂಢಿಸಿಕೊಂಡ ವ್ಯಕ್ತಿ ಹೇಗಿರಬಹುದೆಂದು ಒಂದು ಬಾರಿ ಊಹಿಸಿದರೆ ಮಕ್ಕಳಿಗೆ ಎಷ್ಟು ಅಗತ್ಯವೆಂದು ಅರಿವಾಗುತ್ತದೆ. ಗಾಂಧೀಜಿಯವರು ತಮ್ಮ ಸಪ್ತಪಾತಕ ಗಳಲ್ಲಿ ಶೀಲವಿಲ್ಲದ ಶಿಕ್ಷಣ ಎಂಬುದೂ ಒಂದೆಂದು ಸೂಚಿಸಿದ್ದಾರೆ. ಸಮಾಜ ಆ ಕ್ಷಣದ ಮಟ್ಟಿಗೆ ದುಡ್ಡಿದ್ದವರನ್ನು ಗೌರವಿಸಿದರೂ ಅಜರಾಮರವಾಗುವುದು ವ್ಯಕ್ತಿಯ ವ್ಯಕ್ತಿತ್ವವೇ ಹೊರತು ಇನ್ನಾವುದೂ ಅಲ್ಲ. ಇಂತಿದ್ದಾಗ ಶಿಕ್ಷಣ ಕ್ರಮ ಅದೇಕೆ ಸಹಪಠ್ಯ ಚಟುವಟಿಕೆಗಳನ್ನು ಗಂಭೀರವಾಗಿ ತೆಗೆದುಕೊಂಡಿಲ್ಲವೆಂಬುದು ಪ್ರಶ್ನೆ!

ಪರೀಕ್ಷಾ ವ್ಯವಸ್ಥೆ:

ಸಹಪಠ್ಯ ಚಟುವಟಿಕೆಗಳು ಪ್ರಾಮುಖ್ಯತೆಯನ್ನು ಪಡೆಯದೇ ಇರುವುದಕ್ಕೆ, ಕುಂಠಿತವಾಗಿರುವುದಕ್ಕೆ ಕಾರಣ ಶಿಕ್ಷಕರಲ್ಲ, ವಿದ್ಯಾರ್ಥಿಗಳಂತೂ ಅಲ್ಲವೇ ಅಲ್ಲ. ಪ್ರಮುಖವಾದದ್ದು ಅವನ್ನು ಗಣನೆಗೇ ತೆಗೆದುಕೊಳ್ಳದ ಪರೀಕ್ಷಾ ವ್ಯವಸ್ಥೆ ಹಾಗೂ ತೇರ್ಗಡಾ ನಿಯಮಗಳು. ಒಬ್ಬ ವಿದ್ಯಾರ್ಥಿಯ ಪ್ರಗತಿಯನ್ನು ಅಳೆಯುವುದು ೩ ಭಾಷೆಗಳು, ಗಣಿತ, ವಿಜ್ಞಾನ, ಸಮಾಜದಂಥಾ ಪಠ್ಯ ವಿಷಯಗಳಲ್ಲಿ ಅವನು ಪಡೆದ ಅಂಕದಿಂದಲೇ ಹೊರತು ಆ ವಿದ್ಯಾರ್ಥಿಯು ಗಳಿಸಿದ ದೈಹಿಕ/ ಆರೋಗ್ಯ ಶಿಕ್ಷಣದಿಂದಾಗಲಿ, ನೈತಿಕ ಶಿಕ್ಷಣದಿಂದಾಗಲಿ ಅವನಲ್ಲಿರುವ ಸೇವಾ ಮನೋಭಾವದಿಂದಾಗಲಿ ಅಲ್ಲ.

ಹೀಗಿದ್ದು ಶಾಲೆಯ ಫಲಿತಾಂಶಗಳು ಕಡಿಮೆ ಇದ್ದಾಗ ಯಾವ ಮೂರ್ಖನೂ ಅದನ್ನು ಕಳೆಯಲಾಗಲಿ ಇಷ್ಟಪಡುವುದಿಲ್ಲ. ಇನ್ನೂ ಪರೀವಿಕ್ಷಕರೆಂಬುವವರು ಶಾಲೆಗೆ ಭೇಟಿ ನೀಡಿದಾಗ ಸಹಪಠ್ಯ ಸಾಧನೆ ಬಗ್ಗೆ

ಅಪ್ಪಿತಪ್ಪಿಯೂ ಸೋಲ್ಲೆತ್ತುವುದಿಲ್ಲ. ಇಲಾಖೆ ಈ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳನ್ನಾಗಲೀ ವಿಷಯ ಪರಿಕರಗಳನ್ನಾಗಲೀ ಸ್ಪಷ್ಟಪಡಿಸದೇ ಶಿಕ್ಷಕರನ್ನೂ ಸೋಮಾರಿಯಾಗಲು ಅಗತ್ಯ ಅವಕಾಶ ನೀಡಿದೆ.

ಸಮಗ್ರ ವ್ಯಕ್ತಿತ್ವ ನಿರ್ಮಾಣ:

ಸಹಪಠ್ಯ ಚಟುವಟಿಕೆಗಳಿಗೆ ಪಠ್ಯಕ್ಕೆ ಸಮವಾದ ಅವಧಿ ನೀಡುವುದರೊಂದಿಗೆ ಹೆಚ್ಚು ಹೆಚ್ಚು ವೈವಿಧ್ಯಮಯವಾಗಿಸಿ ಸಮಗ್ರ ವ್ಯಕ್ತಿತ್ವ ನಿರ್ಮಾಣಕ್ಕೆ ಅಗತ್ಯ ಕ್ಷೇತ್ರಗಳನ್ನು ಅಳವಡಿಸಿ ಅವಕ್ಕೆ ಸೂಕ್ತ ಮೌಲ್ಯಮಾಪನ ವ್ಯವಸ್ಥೆ ಮಾಡಿ ಪಠ್ಯಕ್ಕೆ ಸಮನಾದ ಗಮನ ನೀಡುವಂತಾಗಬೇಕು. ಶಾಲೆಯಲ್ಲಿರುವ ಒಬ್ಬೊಬ್ಬ ಶಿಕ್ಷಕನಿಗೂ ಕನಿಷ್ಠ ಒಂದೊಂದು ಸಹಪಠ್ಯ ಚಟುವಟಿಕೆಯಲ್ಲಿ ತರಬೇತಿ ನೀಡಿ ಅದರ ಉಪಯೋಗ ಮಕ್ಕಳಿಗೆ ಕಡ್ಡಾಯವಾಗಿ ಆಗುವ ವ್ಯವಸ್ಥೆ ಮಾಡಬೇಕು. ಪ್ರತಿ ಅರ್ಧವಾರ್ಷಿಕ ಪರೀಕ್ಷೆ ನಂತರ ತಿಂಗಳುಗಟ್ಟಲೆ ರಜೆ ನೀಡದೆ ಆ ಅವಧಿಯಲ್ಲಿ ಹಳ್ಳಿ/ಪಟ್ಟಣಗಳಿಗೆ ಕ್ಯಾಂಪ್‌ಗಳನ್ನು ಹಾಕಿ ಇಲ್ಲವೆ ಶಾಲೆ ಇರುವ ಸ್ಥಳಕ್ಕೆ ಯೋಜನೆಯನ್ನು ಸಿದ್ಧಪಡಿಸಿ ಇಲಾಖೆಯ ಅನುಮೋದನೆಯೊಂದಿಗೆ ಕನಿಷ್ಠ ಹತ್ತು ದಿನಗಳ ದೈಹಿಕ ಶ್ರಮ ಹಾಗೂ ಸೇವೆ ಮಕ್ಕಳಿಂದ ಮಾಡಿಸುವಂತಾಗಬೇಕು. ತಮ್ಮದೇ ಹಳ್ಳಿಯಲ್ಲಿ ಶ್ರಮದಾನ ಮಾಡಿ ಬೆಳೆದ ವ್ಯಕ್ತಿತ್ವ ಮುಂದೆ ಜವಾಬ್ದಾರಿಯುತ ಪ್ರಜೆಯಾಗದೆ ಇರಲಾರ. ಇಂಥ ಶ್ರಮದಾನಗಳನ್ನು ಮಕ್ಕಳ ವಯೋಧರ್ಮಕ್ಕೆ ತಕ್ಕಂತೆ ರೂಪಿಸಿ ಆ ದಿನಗಳಲ್ಲಿ ಕೊರತೆ ಇಲ್ಲದಂತೆ ಆಹಾರ, ವಸತಿ ಹಾಗೂ ಮನರಂಜನಾ ಸೌಲಭ್ಯವನ್ನು ಸಾರ್ವಜನಿಕರಿಂದ/ಸಂಸ್ಥೆಗಳಿಂದ ಏರ್ಪಡಿಸಬೇಕು. ಇಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಪ್ರಮಾಣಪತ್ರ ಮುಂದಿನ ತರಗತಿ ಪ್ರವೇಶಕ್ಕೆ ಕಡ್ಡಾಯಗೊಳಿಸಬೇಕು. ಇದರಿಂದ ಯಾರೂ ಇಂಥ ಕಾರ್ಯಕ್ರಮಗಳನ್ನು ತಾತ್ಸಾರ ಮಾಡದಂತೆ ಆಗುತ್ತದೆ.

ಸರ್ವಾಂಗೀಣ ಅಭಿವೃದ್ಧಿ:

ಇದೇ ರೀತಿ ಶಾಲೆಗಳಲ್ಲಿ ಯೋಗಾಸನದಂಥ ಏಕಾಗ್ರತೆ, ಮನಃಶಾಂತಿ, ಸ್ವಚ್ಛತೆಗೆ ಪೂರಕವಾಗುವಂಥ ಶಿಕ್ಷಣ ಇರಬೇಕು. ಸಾಂಸ್ಕೃತಿಕ ಚಟುವಟಿಕೆಗಳು ಈಗಿನಂತೆ ಕೇವಲ ಶಾಲೆಯ ಆಯ್ದ ಕಾರ್ಯಕ್ರಮಗಳಿಗೆ, ಮನರಂಜನೆಗಷ್ಟೇ ಮೀಸಲಾಗದೇ ದಿನನಿತ್ಯದ ಕಲಿಕೆಯಾಗಬೇಕು. ಹೀಗಾದಾಗ ಮಾತ್ರ ಪ್ರತಿಭೆ ಬೆಳಗುತ್ತದೆ. ಇದರಿಂದ ಶಾಲೆ ಮಕ್ಕಳಿಗೆ ಆಪ್ಯಾಯಮಾನವಾಗುವುದಷ್ಟೇ ಅಲ್ಲದೇ ಸರ್ವಾಂಗೀಣ ಅಭಿವೃದ್ಧಿಯತ್ತ ಕಾಲಿರಿಸಿದಂತಾಗುತ್ತದೆ. ಇದಿಷ್ಟನ್ನು ಮಾಡಲು ತಕ್ಕಂತೆ ಪಠ್ಯದ ಹೊರೆಯನ್ನು ಕಡಿತಗೊಳಿಸುವುದು ಅಷ್ಟೇ ಅವಶ್ಯ ಹಾಗೂ ಅಗತ್ಯ.

(ಸಾಭಾರ:ಪ್ರಜಾವಾಣಿ)

ಪರಿಸರಮುಖಿ ಶಿಕ್ಷಣ

ಪಿ.ಜೆ.ಸಂಜೀವರಾಜ್

೨೦೦೪-೦೫ ರ ಶೈಕ್ಷಣಿಕ ವರ್ಷದಿಂದ ಪರಿಸರವನ್ನು ಒಂದು ಕಡ್ಡಾಯ ವಿಷಯವನ್ನಾಗಿ ಶಿಕ್ಷಣದ ಎಲ್ಲ ಹಂತಗಳಲ್ಲಿ ಬೋಧಿಸಬೇಕೆಂದು ಶ್ರೇಷ್ಠ ನ್ಯಾಯಾಲಯ ಬಹು ದೂರಗಾಮಿ ನಿರ್ದೇಶನ ಕೊಟ್ಟಿದೆ. ಶಾಲಾ ಹಂತದಲ್ಲಿNCEERT, ಕಾಲೇಜು ಹಂತದಲ್ಲಿUGC ಮತ್ತು ವೃತ್ತಿಪರ ಶಿಕ್ಷಣ ಹಂತದಲ್ಲಿ AICTE- ಈ ಸಂಸ್ಥೆಗಳಿಗೆ ಪಠ್ಯ ವಿಷಯವನ್ನು ತಯಾರಿಸುವ ಕಾರ್ಯಭಾರವನ್ನು ವಹಿಸಲಾಗಿದೆ. ಈ ಕೆಲಸವು ನಿಜವಾಗಿಯೂ ಮಹತ್ತರವಾದುದೇ ಆಗಿದೆ.

ಕಳೆದ ಹಲವಾರು ವರ್ಷಗಳಿಂದ ಶಿಕ್ಷಣದ ಹೆಚ್ಚು ಒತ್ತು ಮಾನವಶಾಸ್ತ್ರದ ಬಗ್ಗೆಯೇ ಇದೆ. ಈ ಸಂದರ್ಭದಲ್ಲಿ ಪರಿಸರ ಕೇಂದ್ರಿತ ಶಿಕ್ಷಣವನ್ನು ಉದಾಸೀನಮಾಡಲಾಗಿದೆ. ಆದರೆ ಮಾನವ ಮತ್ತು ಪರಿಸರ ಇವುಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಅಲ್ಲದೆ ಪರಸ್ಪರರ ಉಳಿವಿಕೆಗಾಗಿ ಒಂದು ಇನ್ನೊಂದನ್ನು ಅವಲಂಬಿಸಿದೆ. ರ್‍ಯಾಚಲ್ ಕಾರ್ಸನ್ ತಮ್ಮ ಬಹುವಿಧ ಬಹುಮಾನಿತ ಪುಸ್ತಕ ''silent spring'' ಎಂಬುದರಲ್ಲಿ ಬರೆದ ಮೊದಲನೆಯ ವಾಕ್ಯ 'ಭೂಮಿ ಮೇಲಿನ ಜೀವ ಇತಿಹಾಸವೆಂದರೆ ಜೀವಿತ ವಸ್ತುಗಳು ಮತ್ತು ಅವುಗಳ ಸುತ್ತಲಿನ ವಸ್ತುಗಳ ಮಧ್ಯದ ಪ್ರತಿಸ್ಪಂದನದ ಇತಿಹಾಸವಾಗಿದೆ'. ಪರಿಸರವೆಂದರೆ ನಿರ್ಜೀವ ಮತ್ತು ಸಜೀವ ವಸ್ತುಗಳ ಸುತ್ತುವರಿಯುವಿಕೆಯೆ ಆಗಿದೆ. ಇವೆರಡರ ಮಧ್ಯದ ಸ್ಪಂದನದ ಅಧ್ಯಾಯವೆ ಪರಿಸರ ವಿಜ್ಞಾನ. ಶಿಕ್ಷಣದ ಇತರ ಎಲ್ಲಾ ಕ್ಷೇತ್ರಗಳೊಂದಿಗೆ ಪರಿಸರದ ಸಂಬಧವನ್ನು ಕಲ್ಪಿಸದಿರುವುದೆ ಇಂದಿನ ನಮ್ಮ ಶಿಕ್ಷಣದ ಗಂಭೀರವಾದ ಅಚಾತುರ್ಯವೆನಿಸಿದೆ.

ಪಠ್ಯಕ್ರಮಕ್ಕೆ ಮಾರ್ಗದರ್ಶಿಗಳು:

ಪರಿಸರ ವಿಷಯವು ಮೂಲಭೂತವಾಗಿ ಒಂದು ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿರುತ್ತದೆ. ಆದ್ದರಿಂದ ಭಾರತದಂಥ ವಿಶಾಲ ದೇಶದಲ್ಲಿ ಎಲ್ಲಿ ವೈವಿಧ್ಯಮಯವಾದ ಪ್ರಕೃತಿ ಇದೆಯೊ ಅಂಥಲ್ಲಿ ಏಕರೂಪದ ಪಠ್ಯಕ್ರಮವನ್ನು ತಯಾರಿಸುವುದು ಸಾಧ್ಯವೂ ಇಲ್ಲ, ಉಪಯುಕ್ತವೂ ಅಲ್ಲ. ಅಲ್ಲದೆ ಆ ವಿಷಯದ ಸಂಪರ್ಕವು ಇತರ ಅನೇಕ ಪಠ್ಯಕ್ರಮಗಳ ಜೊತೆಗೆ ಇರಬೇಕಾಗುತ್ತದೆ. ವಾತಾವರಣ ಅಥವಾ ಪರಿಸರ ವಿಜ್ಞಾನ ಎಂಬುದು ಮೂಲತ: ನಿರ್ದಿಷ್ಟ ವಿಷಯದ ಅಧ್ಯಯನ ಕ್ಷೇತ್ರವಾಗಿದೆ.ಆದ್ದರಿಂದ ಕ್ಷೇತ್ರ ಅಧ್ಯಯನ ಪ್ರವಾಸಗಳು ಶಿಕ್ಷಣದ ಎಲ್ಲಾ ಹಂತಗಳ ವಿದ್ಯಾರ್ಥಿಗಳಿಗೆ ಮುಖ್ಯವಾಗಿ ಶಾಲಾಹಂತದ ವಿದ್ಯಾರ್ಥಿಗಳಿಗೆ ಪ್ರಯೋಗಾತ್ಮಕ

ದೃಷ್ಟಿಯಿಂದ ಕಡ್ಡಾಯವಾಗಿರಬೇಕು. ಉನ್ನತ ಹಂತಗಳಲ್ಲಿ ಅದು ಯೋಜನಾಧಾರಿತ ಅಧ್ಯಯನದ ರೂಪದಲ್ಲಿರಬೇಕು. ಈ ಅಧ್ಯಯನಗಳು ಸಾಮೂಹಿಕವಾಗಿರಬಹುದು ಅಥವಾ ವ್ಯಕ್ತಿಗತವಾಗಿರಬಹುದು ಈ ಗುಂಪುಗಳು ಕೊಡುವ ವರದಿಗಳು ಮೌಲ್ಯಮಾಪನಕ್ಕೊಳಪಡಬೇಕು. ಸ್ಥಾನೀಯ ಪರಿಸರವಿಜ್ಞಾನದ ಸಂಗತಿಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪರಿಸರ ವಿಷಯಗಳ ಜೊತೆಗೆ ಸಂಬಂಧವಿರುವಂತೆ ನೋಡಿಕೊಳ್ಳಬೇಕು.

ಮಾಧ್ಯಮಗಳ ಪಾತ್ರ:

ಈ ಪ್ರಕಾರದ ಕ್ರಾಂತಿಕಾರಕ ಶಿಕ್ಷಣದ ಪ್ರಾರಂಭಿಕ ಹಂತಗಳಲ್ಲಿ ಅಧ್ಯಾಪಕರಿಗೆ ವಿಶೇಷ ತರಬೇತಿಯ ಅವಶ್ಯಕತೆಯಿರುತ್ತದೆ. ಈ ತರಬೇತಿಯು ಅಧ್ಯಾಪಕರ ವಿಚಾರಗೋಷ್ಠಿಗಳು, ಪುನಶ್ಚೇತನ ತರಬೇತಿಗಳು, ಮಾರ್ಗದರ್ಶಿಪುಸ್ತಕಗಳು, ಮತ್ತು ಕ್ಷೇತ್ರಅನುಭವಗಳು ಮುಂತಾದವುಗಳನ್ನು ಒಳಗೊಂಡಿರಬೇಕು. ವಾತಾವರಣ ಶಿಕ್ಷಣವು ತರಗತಿಗೆ ಮಾತ್ರ ಸೀಮಿತವಾಗಿರಕೂಡದು. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಆ ಶಿಕ್ಷಣವನ್ನು ಪರಿಸರ ಅಭಿವೃದ್ಧಿ ಶಿಬಿರಗಳ ಮೂಲಕ ವಿಸ್ತರಿಸಬಹುದು. ಈ ಕಾರ್ಯಕ್ರಮದಲ್ಲಿ ಗ್ರಾಮೀಣ ಜನರನ್ನು ಸೇರಿಸಿಕೊಳ್ಳಬೇಕು. ನಮ್ಮ ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಅವರ ಪಾತ್ರ ಹಿರಿದಾಗಿದೆ. ಪರಿಸರದ ಬಹುದೊಡ್ಡ ಬಳಕೆದಾರರು ಮತ್ತು ಅದರ ಮಲಿನತೆಗೆ ಬಹಳವಾಗಿ ಕಾರಣವಾಗಿರುವವರೂ ಆಗಿರುವಂಥ ನಗರವಾಸಿಗಳಿಗೆ ದೂರದರ್ಶನ ಕಾರ್ಯಕ್ರಮಗಳ ಮೂಲಕ, ಸಿ.ಡಿ.ಗಳ ಮೂಲಕ ಪರಿಸರದ ನಿರ್ದಿಷ್ಟ ಅಧ್ಯಯನಗಳ ಪರಿಣಾಮಗಳನ್ನು ಬಿತ್ತರಿಸಬೇಕು. ಇವೆಲ್ಲವೂ ಪ್ರಾದೇಶಿಕ ಭಾಷೆಗಳಲ್ಲಿರಬೇಕು. ಪರಿಸರ ವಿಜ್ಞಾನ, ಮೂಲವಾಗಿ ಜೀವವಿಜ್ಞಾನದ ಒಂದು ಭಾಗವಾಗಿದೆ. ಆದ್ದರಿಂದ ಸುಸ್ಥಿರ ಭವಿಷ್ಯದ ನಿರ್ಮಾಣದಲ್ಲಿ ಇದು ಮಾರ್ಗದರ್ಶಿಯಾಗಿದೆ. ಚಿಂತಕ ಅಲ್ಡಾಸ್ ಹಕ್ಸ್‌ಲಿ ತಮ್ಮ 'ಧೀರೋದಾತ್ತ ಹೊಸ ವಿಶ್ವ' ಎಂಬ ಪುಸ್ತಕದ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ. ''ಜೀವನಕ್ಕೆ ಸಂಬಂಧಿಸಿದ ವಿಜ್ಞಾನಗಳ ಮೂಲಕವೇ ಜೀವನದ ಗುಣಮಟ್ಟವನ್ನು ಆಮೂಲಾಗ್ರವಾಗಿ ಬದಲಿಸಬಹುದು''.

(ಸಾಭಾರ : ಹಿಂದೂ)

ಅನು: ಸು.ಕೌ.

ನಿಮ್ಮನ್ನು ಗರಿಷ್ಠ ಚಿಂತನೆಗೆ ಹಚ್ಚುವ ಪುಸ್ತಕಗಳೇ ನಿಮಗೆ ಅತ್ಯಂತ ನೆರವಾಗುವ ಪುಸ್ತಕಗಳು

ಥಿಯೋಡರ್ ಪಾರ್ಕರ್

ಜಾನಪದದಲ್ಲಿ ಹವಾಮಾನ ಮುನ್ಸೂಚನೆ

ರಿಚರ್ಡ್ ಮಹಾಪಾತ್ರ

ಒರಿಸ್ಸಾದ ಒಂದು ಜಾನಪದ ಗೀತೆಯ ಪ್ರಕಾರ ಒಳ್ಳೆಯ ಮಾವಿನ ಬೆಳೆ, ಉತ್ತಮ ಭತ್ತದ ಬೆಳೆಗೆ ಮುನ್ಸೂಚನೆಯಾಗಿದೆ. ಆದ್ದರಿಂದ ಆ ರಾಜ್ಯದ ಭತ್ತ ಬೆಳೆಯುವ ಮುಖ್ಯ ಪ್ರದೇಶಗಳಲ್ಲಿಯ ರೈತರು ಈ ಒಂದು ಹವಾಮಾನ ಮುನ್ಸೂಚನೆಯ ಆಧಾರದ ಮೇಲೆ ತಾವು ಮಾರಬಹುದಾದ ಭತ್ತದ ಪ್ರಮಾಣವನ್ನು ನಿಗದಿಗೊಳಿಸಿಕೊಳ್ಳುತ್ತಾರೆ. ಒರಿಸ್ಸಾದ ಇನ್ನೊಂದು ಜಾನಪದಗೀತೆಯು ಒಳ್ಳೆಯ ಹುಣಸೆಯ ಬೆಳೆಯನ್ನು ಪ್ರವಾಹದೊಂದಿಗೆ ಸಂಬಂಧ ಕಲ್ಪಿಸುತ್ತದೆ. ಈ ರೀತಿಯ ಉದಾಹರಣೆಗಳು ನಮ್ಮ ದೇಶದ ಉದ್ದಗಲಕ್ಕೂ ಸಿಗುತ್ತವೆ. ಅನೇಕ ತಲೆಮಾರುಗಳ ಭೌಗೋಳಿಕ ಅನುಭವ ಗಳು ಜಾನಪದ ಗೀತೆಗಳಲ್ಲಿ ಸೇರಿಕೊಂಡಿವೆ. ಜಾನಪದಗೀತೆ ಆಯಾಕ್ಷೇತ್ರದ ಹವಾಮಾನದ ಪರಿಪೂರ್ಣವಾದ ಮುನ್ಸೂಚನೆ ಆಗಿದೆ. ಆದರೆ ವಿಜ್ಞಾನದ ಮುಖ್ಯವಾಹಿನಿಯು ಜಾನಪದ ಮಾಹಿತಿಯನ್ನು ಬಹಳ ಉದಾಸೀನವಾಗಿ ಕಂಡಿದೆ. ಆದ್ದರಿಂದ ಒರಿಸ್ಸಾದ ಸಂಭಲ್‌ಪುರ್ ವಿಶ್ವವಿದ್ಯಾಲಯದ ಜೀವವಿಜ್ಞಾನ ವಿಭಾಗದ ವಿಜ್ಞಾನಿಯಾದ **ಅರ್ಥಬಂಧು ಮಿಶ್ರ** ಬರಗಾಲದ ಮನ್ಸೂಚನೆಯನ್ನು ತಿಳಿಸುವಂತಹ ಒರಿಯಾ ಭಾಷೆಯ ಜಾನಪದ ಗೀತೆಗಳ ಸಂಗ್ರಹವನ್ನು ಹೊರತಂದಾಗ ಅವರ ಅನೇಕ ಜೊತೆಗಾರರನ್ನು ಆಶ್ಚರ್ಯಕ್ಕೀಡುಮಾಡಿತು. ಭುವನೇಶ್ವರದಲ್ಲಿರುವ ಒಂದು ಸ್ವಯಂ ಸೇವಾ ಸಂಸ್ಥೆಯು ಮಿಶ್ರಾರ ಆ ಸಂಕಲನವನ್ನು ಪ್ರಕಟಿಸಿತು. ಆ ಸಂಕಲನದಲ್ಲಿ ಒರಿಸ್ಸಾದ ಪಶ್ಚಿಮ ಭಾಗದ ಬರಪೀಡಿತ ಪ್ರದೇಶಗಳನ್ನು ಕುರಿತು ಎರಡು ಅಧ್ಯಾಯಗಳಿವೆ.

ಮಿಶ್ರಾರ ಪ್ರಕಾರ 'ಜಾನಪದಗೀತೆಯಲ್ಲಿಯ ಹವಾಮಾನ ಮುನ್ಸೂಚನೆ ಶತ–ಶತಮಾನಗಳ ವಾಯುಗುಣದ ನಿರೀಕ್ಷೆಯ ಮೇಲೆ ಆಧರಿಸಿರುತ್ತದೆ. ಆದ್ದರಿಂದ ಅದು ಸಾಮಾನ್ಯ ಜನರ ಜೀವನದ ಭಾಗವಾಗಿದೆ'. ಈ ಪುಸ್ತಕದಲ್ಲಿಯ ಮಾಹಿತಿಗಳು ಹೆಚ್ಚಾಗಿ ಮೌಖಿಕ ಪರಂಪರೆಯನ್ನು ಅವಲಂಬಿಸಿದ್ದಾಗ್ಯೂ ಕೆಲವೊಂದುಸಲ ಬರಹ ರೂಪದಲ್ಲಿರುವ ಮಾಹಿತಿಯು ಸಹ ಮಿಶ್ರಾರ ಉಪಯೋಗಕ್ಕೆ ಬಂದಿದೆ. ಸಂಗ್ರಹಿತವಾಗಿರುವ ಒಂದು ಜಾನಪದ ಗೀತೆಯ ಪ್ರಕಾರ ಕಾರ್ತಿಕ ಮಾಸದ ಹುಣ್ಣಿಮೆಯ ದಿನ ಸ್ವಚ್ಛವಾದ ಆಕಾಶವಿದ್ದರೆ ಒಳ್ಳೆಯ ಹಿಂಗಾರು ಬೆಳೆಯ ದ್ಯೋತಕವಾಗಿದೆ. ಆದರೆ ಆ ರಾತ್ರಿ ಮಳೆಯಾದಲ್ಲಿ ರೈತರು ತಮ್ಮ ಹೊಲಗಳಿಗೆ ಹೋಗುವ ಸಾಹಸ ಮಾಡಕೂಡದೆಂದು ತಿಳಿಸುತ್ತದೆ. ಇದೇ ಸಂಕಲನ ಒಂದು ವರ್ಷದಲ್ಲಿ ಯಾವುದಾದರೂ ತಿಂಗಳುಗಳಲ್ಲಿ ಐದು ಭಾನುವಾರಗಳು ಬಂದರೆ ಅನೇಕ ಸ್ಥಳಗಳಲ್ಲಿ ಬರವೂ ಮತ್ತು

ಪ್ರವಾಹವೂ ಏಕಕಾಲಕ್ಕೆ ಉಂಟಾಗುತ್ತದೆಂದು ಮುನ್ಸೂಚನೆ ಕೊಡುತ್ತದೆ. ೧೯೯೨ರಲ್ಲಿ ಮಾರ್ಚ್, ಮೇ, ಆಗಸ್ಟ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಐದು ಭಾನುವಾರಗಳು ಬಂದಿದ್ದವು. ಆ ವರ್ಷ ಭಾರತದಲ್ಲಿ ಪ್ರವಾಹ ಮತ್ತು ಬರ ಎರಡೂ ಸಂಭವಿಸಿದ್ದವು. ಬೇರೆ ಬೇರೆ ಪ್ರದೇಶಗಳಲ್ಲಿರುವ ಜಾನಪದ ಗೀತೆಗಳಲ್ಲಿ ಸ್ಥಳೀಯವಾದ ಭೌಗೋಳಿಕ ಪರಿಸ್ಥಿತಿಯ ಸೂಚನೆಗಳಿರುತ್ತವೆ. ಅವು ಪ್ರತ್ಯೇಕವಾಗಿ ಮಳೆ ಮತ್ತು ಬರವನ್ನು ಮುನ್ಸೂಚಿಸುತ್ತವೆ. ಉದಾಹರಣೆಗೆ ಗುಬ್ಬಚ್ಚಿಗಳು ತಮ್ಮ ಮೇಲೆ ಮಣ್ಣನ್ನು ಹುಯ್ದುಕೊಳ್ಳುತ್ತಿದ್ದರೆ, ಇರುವೆಗಳು ಹುಳುಗಳನ್ನು ಸಾಗಿಸುತ್ತಿದ್ದರೆ ಮತ್ತು ಮೇಕೆಗಳು ಕೂಗಾಟಮಾಡುತ್ತಿದ್ದರೆ ಇದರ ಸಂಕೇತ ಮಳೆಯ ಮುನ್ಸೂಚನೆ. ೨೦೦೩ ರಲ್ಲಿ ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಗೆ ಮೊದಲೇ ರಾಜಸ್ಥಾನದ 'ಬಿಲ್' ಬುಡಕಟ್ಟು ಜನರು ಮುಂಬರುವ ಕಷ್ಟದ ಸಮಯಕ್ಕಾಗಿ ಸಿದ್ಧತೆಮಾಡಿಕೊಳ್ಳುತ್ತಿದ್ದರು. ಏಕೆಂದರೆ ಅವರ ಜಾನಪದ ಗೀತೆಯ ಪ್ರಕಾರ ಯಾವಾಗ 'ಖ್ಯೆರ್' ಎಂಬ (ಅಕೇಶಿಯಾ)(ಖಟೇಚು) ಮರಗಳು ಎಂದಿಗಿಂತ ಹೆಚ್ಚು ಹುಲುಸಾಗಿ ಮತ್ತು ದಟ್ಟವಾಗಿ ಬೆಳೆಯುತ್ತವೋ ಆಗ ಸೌತೇಕಾಯಿ ಅಸಾಧಾರಣವಾಗಿ ಎಲ್ಲೆಡೆಯೂ ಮೊಳಕೆಯೊಡೆಯುತ್ತವೆ. ಇದರ ಅರ್ಥ ಇಷ್ಟರಲ್ಲಿಯೆ ಬರ ಬರಲಿದೆ. ೨೦೦೩ರಲ್ಲಿ ಇದೇ ರೀತಿ ಬರ ಬಂತು ಮತ್ತು 'ಬಿಲ್' ರು ಹವಾಮಾನ ಇಲಾಖೆಯ ಮುನ್ಸೂಚನೆಯ ಎಷ್ಟೋ ಸಮಯ ಮೊದಲೇ ತಮ್ಮ ಹಳ್ಳಿಗಳನ್ನು ಬಿಟ್ಟುಹೋಗಿದ್ದರು. ಜಾನಪದ ಗೀತೆ ಅಪಾಯವನ್ನು ಸೂಚಿಸುವಂತೆಯೇ, ಅದರಿಂದ ಪಾರಾಗುವ ಬಗೆಯನ್ನೂ ಸೂಚಿಸುತ್ತದೆ. ಉದಾಹರಣೆಗೆ ಒಂದು ಒರಿಯಾ ಜಾನಪದಗೀತೆಯ ಪ್ರಕಾರ ರೈತರು ತಮ್ಮ ಉಳುಮೆಯನ್ನು ಐದು ಜನ ಸೇರಿ ಪ್ರಾರಂಭಿಸಬೇಕು ಮತ್ತು ಸಮೂಹವಾಗಿ ಸಾಲಪಡೆಯಬೇಕು. ಹೀಗೆ ಪಾರಂಪರಿಕ ಜ್ಞಾನದಲ್ಲಿ ಸ್ವ-ಸಹಾಯ ಗುಂಪುಗಳ ಮತ್ತು ಸಾಮೂಹಿಕ ವ್ಯವಸಾಯದ ಉಲ್ಲೇಖವಿದೆ.

ಇಂತಹ ಜ್ಞಾನವು ಲಿಖಿತದಲ್ಲಿ ಸಹ ಇದೆ ಮತ್ತು ಗ್ರಾಮೀಣ ಪ್ರದೇಶದ ಸ್ಥಳೀಯ ಮಾರುಕಟ್ಟೆಯಲ್ಲಿ ಲಭ್ಯವಿದೆ. ಅಂತಹವುಗಳಲ್ಲಿ ರೈತರ ಪಂಚಾಂಗಗಳು. ಆ ಪಂಚಾಂಗಗಳು ಕ್ರಿಸ್ತಪೂರ್ವ ನಾಲ್ಕನೆ ಶತಮಾನದಿಂದಲೂ ಉಪಯೋಗದಲ್ಲಿವೆ. ಜಾನಪದ ಗೀತೆ, ಭವಿಷ್ಯ, ಧಾರ್ಮಿಕ ಕ್ರಿಯೆಗಳು ಮತ್ತು ಪ್ರಾಚೀನ ಸಾಹಿತ್ಯ ಇತ್ಯಾದಿಗಳನ್ನು ಆಧರಿಸಿ ಬರೆಯಲಾಗಿರುವ ಸುಮಾರು ಮೂವತ್ತು ಪಂಚಾಂಗಗಳು ದೇಶದ ವಿವಿಧ ಭಾಗಗಳಲ್ಲಿ ದೊರೆಯುತ್ತವೆ. ಇವು ಅಮೇರಿಕಾದಲ್ಲಿ ಪ್ರಕಟಗೊಂಡಿರುವ ರೈತರ ಹಳೆಯ ಪಂಚಾಂಗದೊಂದಿಗೆ ಸರಿಸಮಾನವಾಗಿವೆ. ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಕೇಂದ್ರವು ತನ್ನ ಪಾರಂಪರಿಕ ಜ್ಞಾನ ಎಂಬ ಪತ್ರಿಕೆಯ ಮೂಲಕ ಇದೆಲ್ಲವನ್ನು ಸಂಗ್ರಹಿಸುತ್ತಿದೆ. ಜಾನಪದ ಗೀತೆಗಳಲ್ಲಿಯ ಹವಾಮಾನ ಮುನ್ಸೂಚನೆಯನ್ನು ವೈಜ್ಞಾನಿಕವಾಗಿ ಪರಿಷ್ಕರಿಸುವ ಕಾರ್ಯ ವ್ಯವಸ್ಥಿತವಾಗಿ ನಡೆದಿಲ್ಲ. ಆದರೆ ಗುಜರಾತಿನ ಜುನಾಘಡ್ ಜಿಲ್ಲೆಯಲ್ಲಿರುವ

ಕೃಷಿಕಾಲೇಜಿನ ಪಿ.ಆರ್.ಖನಾನಿ, ವಿ.ಸಾವಲಿಯ ಮತ್ತು ಬಿ.ಸಿ.ರಾವಲ್ ಮುಂತಾದವರು ಜಾನಪದ ಗೀತೆಗಳಲ್ಲಿಯ ಹವಾ ಮುನ್ಸೂಚನೆಯನ್ನು ವೈಜ್ಞಾನಿಕವಾಗಿ ಪರಿಷ್ಕರಿಸುವ ಪ್ರಯತ್ನಮಾಡಿದ್ದಾರೆ. ಅವರು ೧೯೯೦ರಿಂದ ಪ್ರಾರಂಭಿಸಿ ಐದು ವರ್ಷಗಳ ಅವಧಿಯಲ್ಲಿಯ ಪ್ರತಿನಿತ್ಯದ ಮಳೆಯ ಅಂಕಿ-ಸಂಖ್ಯೆಗಳನ್ನು ಸಂಗ್ರಹಿಸಿದ್ದಾರೆ ಮತ್ತು ಆ ರೀತಿ ತಾವು ಸಂಗ್ರಹಿಸಿದ ಮಾಹಿತಿಯನ್ನು ಪಾರಂಪರಿಕ ಹಾಗೂ ಜಾನಪದ ಗೀತೆಗಳಲ್ಲಿಯ ಸಂಗತಿಗಳೊಂದಿಗೆ ತೌಲನಿಕವಾಗಿ ಪರೀಕ್ಷಿಸಿ ನೋಡಿದ್ದಾರೆ. ಹಾಗೆ ಪರೀಕ್ಷಿಸಿದಾಗ ಜಾನಪದ ಗೀತೆಗಳಲ್ಲಿಯ ಮುನ್ಸೂಚನೆಗಳು ಬಹಳ ನಿಖರವಾಗಿರುವುದು ತಿಳಿದುಬಂದಿದೆ.

ಈ ಸಂದರ್ಭದಲ್ಲಿ ಮಿಶ್ರಾ ಒಂದು ಎಚ್ಚರಿಕೆಯ ಮಾತನ್ನು ಹೇಳುತ್ತಾರೆ.ಅವರ ಪ್ರಕಾರ ಪಾರಂಪರಿಕ ಮುನ್ಸೂಚನೆಗಳು ಹವಾಮಾನದಲ್ಲಿಯ ವ್ಯತ್ಯಾಸದಿಂದಾಗಿ ಹೆಚ್ಚು ಸರಿಯಾಗಿರಲು ಸಾಧ್ಯವಿಲ್ಲದಿರಬಹುದು. ಮಿಶ್ರಾ ತಮ್ಮ ಪುಸ್ತಕವನ್ನು ಬರೆಯುವಾಗ ಜಾನಪದ ಗೀತೆಗಳಲ್ಲಿ ೧೨೦ ಮಳೆಯ ದಿನಗಳಿರುವುದನ್ನು ಗರುತಿಸಿದ್ದರು.

ಇದನ್ನು ಆಧರಿಸಿಯೇ ಮುಂದಿನ ಎಲ್ಲಾ ಮಳೆಗಾಲದ ಸೂಚನೆಗಳಿದ್ದವೆಂಬುದನ್ನು ಕಂಡುಹಿಡಿದರು. ಅವರು ನಂತರ ಒರಿಸ್ಸಾ ರಾಜ್ಯದ ಮಳೆಗಾಲವನ್ನು ಕ್ರಿಸ್ತಶಕ ೧೮೫೦ ರಿಂದ ೧೮೮೦ ರ ವರೆಗೆ ಮತ್ತು ೧೯೫೦ ರಿಂದ ೧೯೮೦ರ ವರೆಗಿನ ರಾಜ್ಯದ ಮಳೆಯ ಮಾಹಿತಿಯನ್ನು ಅಭ್ಯಾಸಿಸಿದಾಗ ಸರಾಸರಿ ಮಳೆಯ ದಿನಗಳು ೬೦ ಇರುವುದಾಗಿ ಕಂಡು ಬಂತು. ಈಗ ಈ ಸಂಖ್ಯೆಯು ೫೦ಕ್ಕೆ ಇಳಿದಿದೆ.

ಸಾಭಾರ : ಡೌನ್ ಟು ಅರ್ಥ್

ಅನು: ಸು. ಕೌ

(ಪುಟ-13 ರಿಂದ ......)

ಪೋಲಿಸರಿಂದ ದೂರವಾಣಿ ಕರೆ ಬಂತು. ನಿಮ್ಮ ಮಗ ಒಂದು ಕಟ್ಟಡದ ಮೇಲಿಂದ ಬಿದ್ದು ಸತ್ತಿದ್ದಾನೆ. ಅವನ ದೇಹವನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿಡಲಾಗಿದೆ. ಇದು ಆತ್ಮಹತ್ಯೆ ಎಂದೆನಿಸುತ್ತದೆ ಎಂದು ಹೇಳಿದರು.

ದುಃಖಭರಿತರಾದ ರಾಜೇಶನ ತಂದೆ-ತಾಯಿಗಳು ಆಸ್ಪತ್ರೆಗೆ ಧಾವಿಸಿದರು. ಶವವನ್ನು ಗುರ್ತಿಸಲೆಂದು ಅವರನ್ನು ಶವಾಗಾರಕ್ಕೆ ಕರೆದುಕೊಂಡು ಹೋಗಲಾಯಿತು. ಅವರು ತಮ್ಮ ಮಗನನ್ನು ಗುರುತಿಸಿದರು ಅವನಿಗೆ ಒಂದು ಕೈ ಮತ್ತು ಒಂದು ಕಾಲಿರಲಿಲ್ಲ.

-ಸ್ಪಾರ್ಕ್ ಸಾಭಾರ-ಅನು : ಸು.ಕೌ.

ಜನಪದ ನಿಲಯದ ಅಂತರಂಗದಲ್ಲಿ.....೮

ಸುರೇಂದ್ರ ಕೌಲಗಿ



ಮೇಲುಕೋಟೆಯನ್ನು ನನ್ನ ಕಾರ್ಯಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಳ್ಳಬೇಕೆಂದು ತೀರ್ಮಾನಿಸಿದ ಮೇಲೆ ನನ್ನ ತೀರ್ಮಾನವನ್ನು ಗ್ರಾಮಸ್ಥರಿಗೆ ತಿಳಿಸಿ ನನ್ನ ಮುಂದಿನ ಕಾರ್ಯಗಳಲ್ಲಿ ಅವರ ಸಹಕಾರ ಪಡೆಯಬೇಕೆಂಬ ಉದ್ದೇಶ್ಯದಿಂದ ಗ್ರಾಮಸ್ಥರ ಒಂದು ಸಭೆಯನ್ನು ಏರ್ಪಡಿಸಬೇಕೆಂದು ಯೋಚಿಸಿದೆ, ಆ ಪ್ರಕಾರ ಜಗ್ಗು ನಾರಾಯಣರ ಸಹಾಯದಿಂದ ಒಂದು ದಿನ ಮಧ್ಯಾಹ್ನ, ಶ್ರೀ ಆಂಡಾಳ್ ರಾಮನುಜ ಕೂಟ ಎಂಬ ಛತ್ರದಲ್ಲಿ , ಯಾವ ಸ್ಥಳದಲ್ಲಿ ವಿನೋಬಾ ತಮ್ಮ ಮೇಲುಕೋಟೆಯ ಭೇಟಿಯ ಸಂಧರ್ಭದಲ್ಲಿ ತಂಗಿದ್ದರೋ, ಆ ಛತ್ರದಲ್ಲೇ ಗ್ರಾಮಸ್ಥರ ಒಂದು ಸಭೆಯನ್ನು ಸೇರಿಸಲಾಯಿತು. ಈ ಸಭೆ ದೊಡ್ಡದಾಗಿರಲಿಲ್ಲ. ಆಗ ಗ್ರಾಮದ ಮುಖ್ಯರೆಂದು ಯಾರಿದ್ದರೋ, ಹಿರಿಯರೆಂಬುವವರು ಯಾರಿದ್ದರೋ ಅವರೆಲ್ಲರೂ ಆ ಸಭೆಯಲ್ಲಿದ್ದರು, ಆ ಸಭೆಗೆ ಜಗ್ಗು ನನ್ನ ಪರಿಚಯವನ್ನು ಮಾಡಿಕೊಟ್ಟು ನನ್ನ ಇಂಗಿತವನ್ನು ಹೇಳಿದರು. ಆನಂತರ ನನ್ನ ಕೆಲ ವಿಚಾರಗಳನ್ನು ತಿಳಿಸಿ ಎಲ್ಲರ ಸಹಕಾರವನ್ನು ಕೋರಿದೆ, ನನ್ನದು ಪೂರ್ತ ಸ್ವಯಂಸೇವಕನ ರೂಪದಲ್ಲಿ ಮತ್ತು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದ ರೀತಿಯಲ್ಲಿ ಕಾರ್ಯವಿಧಾನವಿರುವುದಾಗಿ ಹೇಳಿದೆ. ಅಲ್ಲಿ ನೆರೆದಿದ್ದ ಸಭಿಕರು ತಮ್ಮ ನೈತಿಕ ಬೆಂಬಲವನ್ನ ಸೂಚಿಸಿದರು.

ನಾನು ಮೇಲುಕೋಟೆಗೆ ಬರುವ ಮೊದಲು ಜಯಪ್ರಕಾಶ ನಾರಾಯಣರೊಂದಿಗೆ ೧೯೫೭ರ ಸುಮಾರಿನಲ್ಲಿ ಮೈಸೂರಿನ ಬಳಿ ಇಲವಾಲದಲ್ಲಿ ನಡೆದಿದ್ದ ಅಖಿಲ ಭಾರತ ಸರ್ವಪಕ್ಷಗಳ ಗ್ರಾಮದಾನ ಸಮ್ಮೇಳನಕ್ಕೆ ಬಂದಿದ್ದೆ. ಅದೊಂದು ಐತಿಹಾಸಿಕ ಸಮ್ಮೇಳನ. ಆದರೆ ಎಲ್ಲ ಮಹತ್ವದ ಸಾರ್ವಜನಿಕ ಸಂಗತಿಗಳನ್ನು ಜನರು ಮರೆಯುವಂತೆ ಈ ಗ್ರಾಮದಾನ ಸಮ್ಮೇಳನವನ್ನೂ ಸಹ ಜನ ಮರೆತಿದ್ದಾರೆ. ಈ ಸಮ್ಮೇಳನದಲ್ಲಿ ಭಾಗವಹಿಸಲು ಎಲ್ಲ ರಾಜಕೀಯ ಪಕ್ಷಗಳ ನಾಯಕರು ಬಂದಿದ್ದರು, ಜವಾಹರಲಾಲ್ ನೆಹರೂ, ಡಾ॥ ಬಾಬುರಾಜೇಂದ್ರ ಪ್ರಸಾದ್,

ಜಯಪ್ರಕಾಶ ನಾರಾಯಣ್, ಇ.ಎಂ.ಎಸ್.ನಂಬೂದರಿಪಾದ್, ಝು.ಎ.ಅಹಮ್ಮದ್, ಸರ್ವೋದಯದ ಹಿರಿಯ ನಾಯಕರು, ಕರ್ನಾಟಕದ ಕೆ.ಹನುಮಂತಯ್ಯ, ಎಸ್,ನಿಜಲಿಂಗಪ್ಪ ಮುಂತಾದವರೆಲ್ಲರು ಅದರಲ್ಲಿ ಭಾಗವಹಿಸಿದ್ದರು. ವಿನೋಬಾರ ನೇತೃತ್ವದೊಂದಿಗೆ, ಈ ಸಮ್ಮೇಳನದಲ್ಲಿ ಎಲ್ಲ ರಾಜಕೀಯ ಪಕ್ಷಗಳು ಗ್ರಾಮದಾನ ಆಂದೋಲನವನ್ನು, ತನ್ಮೂಲಕ ಗ್ರಾಮಸ್ವರಾಜ್ಯದ ಸ್ಥಾಪನೆಯ ವಿಚಾರವನ್ನು ಅಂಗೀಕರಿಸಿಕೊಂಡು ಅದನ್ನು ತಮ್ಮ-ತಮ್ಮ ಪಕ್ಷಗಳ ಕಾರ್ಯಕ್ರಮವೆಂದೂ ಒಪ್ಪಿಕೊಂಡವು, ಆದರೆ ಆ ಹೇಳಿಕೆಯ ಮೇಲೆ ಹಾಕಿದ ಹಸ್ತಾಕ್ಷರದ ಮಸಿ ಆರುವ ಮೊದಲೇ ರಾಜಕೀಯ ಪಕ್ಷಗಳು ಇಲವಾಲ ಘೋಷಣೆಯ ಆರ್ಥಿಕ-ಸಾಮಾಜಿಕ-ರಾಜಕೀಯದ ದೂರಗಾಮಿ ಪರಿಣಾಮವನ್ನು ಮರೆತುಬಿಟ್ಟವು! ಆದ್ದರಿಂದ ಇಲವಾಲ ಗ್ರಾಮದಾನ ಸಮ್ಮೇಳನದ ವಿಷಯ ಇತಿಹಾಸದ ಅನೇಕ ಮಹತ್ವದ ವಿಷಯಗಳಂತೆ ಮರೆತುಹೋಯಿತು. ಈ ಇಲವಾಲ ಸಮ್ಮೇಳನದಲ್ಲಿ ಪ್ರಮುಖ ಪಾತ್ರವಹಿಸಿದ ಸರ್ವೋದಯ ಕಾರ್ಯಕರ್ತರಲ್ಲಿ ಅನಂತರಂಗಾಚಾರ್, ಖಾದ್ರಿ ಶಾಮಣ್ಣ, ಸೀತಾರಾಮ್ ಅಯ್ಯಂಗಾರ್, ಸತ್ಯವ್ರತ, ಹೆಚ್.ಎಸ್.ದೊರೆಸ್ವಾಮಿ ಮತ್ತು ಇನ್ನು ಅನೇಕರು ಮುಖ್ಯರಾಗಿದ್ದರು. ಇಲವಾಲ ಸಮ್ಮೇಳನ ಮುಗಿಸಿ ವಿನೋಬಾ ಮೈಸೂರು ನಗರಕ್ಕೆ ಬಂದರು.ಅಲ್ಲಿ ಎರಡು-ಮೂರು ದಿನ ಇದ್ದರು. ಆಗ ಅವರನ್ನು ಈಗಿನ ಜಿಲ್ಲಾ ಅಧಿಕಾರಿ ಕಛೇರಿಯ ಆವರಣದಲ್ಲಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಸೇರಿದ ಕಟ್ಟಡದಲ್ಲಿ ಇರಿಸಲಾಗಿತ್ತು. ಜಯಪ್ರಕಾಶ ನಾರಾಯಣರೊಂದಿಗೆ ೧೯೫೪ರಿಂದ ೧೯೫೭ರ ವರೆಗೆ ಅಪ್ತ ಸಹಾಯಕನಾಗಿ ಕೆಲಸಮಾಡಿ, ಸ್ವತಂತ್ರವಾಗಿ ಗ್ರಾಮ ನಿರ್ಮಾಣದ ಕೆಲಸದಲ್ಲಿ ತೊಡಗಬೇಕೆಂಬ ನನ್ನ ವಿಚಾರವನ್ನು ಜೆ.ಪಿ.ಯವರಿಗೆ ತಿಳಿಸಿದ್ದೆ. ಅವರೂ ಸಹ ಸಮ್ಮತಿಸಿ ನನ್ನನ್ನು ವಿನೋಬಾರ ಬಳಿಗೆ ಕರೆದುಕೊಂಡು ಹೋಗಿ ಅವರಿಗೂ ಸಹ ನನ್ನ ವಿಚಾರವನ್ನು ತಿಳಿಸಿ ಅವರ ಆಶೀರ್ವಾದ ನನಗೆ ದೊರೆಯುವಂತೆ ಮಾಡಿದರು. ಆನಂತರ ಯಾವ ಪ್ರದೇಶದಲ್ಲಿ ಕೆಲಸ ಮಾಡಬೇಕೆಂಬ ಪ್ರಶ್ನೆ ಎದುರಾಯಿತು. ಅನೇಕ ಸ್ಥಳಗಳ ಬಗ್ಗೆ ಸಲಹೆಗಳು ಬಂದವು. ನಾನು ಮೈಸೂರಿನ ಸರ್ವೋದಯ ಕಾರ್ಯಕರ್ತರ ಸಲಹೆ ಮೇರೆಗೆ ಮೇಲುಕೋಟೆಗೆ ಬಂದೆ.

(ಮುಂದುವರಿಯುವುದು)

ಸನ್ಮಾನ್ಯರಿಂದ

ಜನಪದ ವಿಚಾರ ತಲುಪಿದೆ ಅದರಲ್ಲಿಯ ಲೇಖನಗಳನ್ನು ಓದಿದ್ದೇನೆ. ಶ್ರೇಷ್ಠ ಮನುಷ್ಯರ ಜೀವನಗತಿಯನ್ನು ಓದಿ ಆನಂದವಾಯಿತು. ಷಾರ್ಟ್ ಆಗಿ ಸ್ವೀಟ್ ಆಗಿವೆ.

ಡಾ|| ಜಯಪ್ರಕಾಶ ಮಾವಿನಕುಳಿ, ಮೂಡುಬಿದಿರೆ.

ಜನಪದ ವಿಚಾರ ಡೈಜೆಸ್ಟ್ ಬಂದು ಸೇರಿದೆ. ಕೃತಜ್ಞನಾಗಿದ್ದೇನೆ. ಸಂಚಿಕೆಯಲ್ಲಿ ಉಪಯುಕ್ತ ಲೇಖನಗಳಿವೆ. ಪತ್ರಿಕೆಗೆ ಯಶಸ್ಸು ಸಿಗಲಿ ಎಂದು ಹಾರೈಸುತ್ತೇನೆ.

ಶೇಷನಾರಾಯಣ, ಬೆಂಗಳೂರು.

ಜನಪದ ವಿಚಾರದ ಇತ್ತೀಚಿಗಿನ ಸಂಚಿಕೆ ತಲುಪಿದೆ. ಕೃತಜ್ಞತೆಗಳು. ವೈಚಾರಿಕ ಡೈಜೆಸ್ಟ್ ಧೋರಣೆಗನುಸಾರವಾಗಿ ಉಪಯುಕ್ತಲೇಖನಗಳನ್ನು ಆಯ್ದು ವೈವಿಧ್ಯವಿರುವಂತೆ ನೋಡಿಕೊಂಡಿದ್ದೀರಿ. 'ಮೇ ತಿಂಗಳ ಮಹಾನುಭಾವರು' ವಿಚಾರ ಚೆನ್ನಾಗಿದೆ. ಅಭಿನಂದನೆಗಳು. ಬಿಡುವಾದಾಗ ಲೇಖನಗಳನ್ನು ಬರೆಯಲು ಪ್ರಯತ್ನಿಸುತ್ತೇನೆ. ಸ್ನೇಹಿತರಿಗೂ ತಿಳಿಸುತ್ತೇನೆ.

ಚೆನ್ನವೀರಕಣವಿ, ಧಾರವಾಡ.

ಮೇ ಮಾಹೆಯ ಜನಪದ ವಿಚಾರ ವಿಚಾರಪ್ರಿಯರಿಗೆ ಒಳ್ಳೆಯ ಗ್ರಾಸ. ಎಲ್ಲ ಲೇಖನಗಳೂ ಅಚ್ಚುಮೆಚ್ಚಾಗಿವೆ. ಸಂಪಾದಕರ ಶ್ರಮ ಸಾರ್ಥಕ. ಎಷ್ಟೇ ಬೊಬ್ಬೆಯಿಟ್ಟರೂ ಹಳ್ಳಿಯ ಬದುಕು ಇಂದು ಹಳ್ಳಿಗರಿಗೇ ರುಚಿಸುತ್ತಿಲ್ಲ. ಹಳ್ಳಿಯ ಬದುಕು ಅನಿವಾರ್ಯವಾದವರೂ ಹಳ್ಳಿಯಲ್ಲಿ ನಗರದ ಶೈಲಿಯ ಜೀವನವನ್ನೆ ಏರ್ಪಡಿಸಿಕೊಳ್ಳುತ್ತಿದ್ದಾರೆ. ಜನಪದವನ್ನು ಪ್ರೀತಿಸುವರ ದೃಷ್ಟಿ ಮಂಜಾಗುತ್ತಿದೆ. ಪ್ರಯತ್ನಗಳು ಮರುಮಣ್ಣಾಗುತ್ತಿವೆ.ಈ ಹಿನ್ನೆಲೆಯಲ್ಲಿ ಗ್ರಾಮೀಣ ಜೀವನವನ್ನು ಅರ್ಥಮಾಡಿಕೊಳ್ಳವ, ಪ್ರೀತಿಸುವ ಧೋರಣೆಯಿಂದ ಲೇಖನಗಳು ಬರಲಿ. ಹಳ್ಳಿಗರೂ ಓದಿ ಮೆಚ್ಚುವಂತಾಗಲಿ.

ಉಮಾಕಾಂತ ಭಟ್ಟ, ಮೇಲುಕೋಟೆ, ಜನಪದ ವಿಚಾರಕ್ಕೆ ಅಂಟಿಕೊಂಡವ.

ನೀವು ಪ್ರಕಟಿಸುತ್ತಿರುವ ಜನಪದ ವಿಚಾರ ಪತ್ರಿಕೆ ಚೆನ್ನಾಗಿ ಮೂಡಿಬರುತ್ತಿದೆ.

ಎಸ್. ಕೆ. ಹರಿಹರೇಶ್ವರ್, ಮೈಸೂರು.

ಮೇ-ಜೂನ್ ತಿಂಗಳ ಪತ್ರಿಕೆ ಬಂದಿದೆ. ತುಂಬ ಉಪಯುಕ್ತ ವಿಷಯ ಕೊಟ್ಟಿದ್ದೀರಿ. ಈ ನಡುವೆ ಪತ್ರಿಕೆ ಒಳ್ಳಯ ರೂಪವನ್ನು ಪಡೆದುಕೊಳ್ಳುತ್ತಿದೆ,ಸಂತೋಷ. ಪ್ರಸಾರ ಹೆಚ್ಚಿದರೆ ಇನ್ನೂ ಸಂತೋಷ. ಮೇ ತಿಂಗಳಿನ ಕೆಲವು ಮಹಾಪುರುಷರ ಬಗ್ಗೆ ಬರೆದಿದ್ದೀರಿ. ಬಹು ಸೂಕ್ತವಾಯಿತು.

ನೀಲತ್ತಹಳ್ಳಿ ಕಸ್ತೂರಿ, ಬೆಂಗಳೂರು.

ವಾಚಕ ಮಿತ್ರರಲ್ಲಿ ವಿನಂತಿ.

ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಿಂದ ಪ್ರಸ್ತುತ ವಿಷಯಗಳಿಗೆ ಸಂಬಧಿಸಿದಂತೆ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿ ಕೊಡಲು ಆಸಕ್ತವುಳ್ಳ ಸ್ನೆಹಿತರ ಸಹಾಯವನ್ನು ಜನಪದ ವಿಚಾರ ಬಯಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ ೧೦೦/- ರೂ. ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

–ಪ್ರಕಾಶಕರು



KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431
Phone : 08236 – 298754 e-mail : janapada@yahoo.com